

# ರೋಲಸ್ ಲಿನೆಯಸ್

ಎಚ್. ಕೆ. ಮಲ್ಲಿಕಾರ್ಜುನಪ್ಪ, ಎಂ.ಎಸ್‌ಸಿ.,

ಪ್ರಚಾರ ಪುಸ್ತಕ ಮಾಲೆ—೧೫೯

ಪ್ರಸಾರಾಂಗ,

ಮೈಸೂರು ವಿಶ್ವವಿದ್ಯಾನಿಲಯ.

ಮೈಸೂರು ವಿಶ್ವವಿದ್ಯಾನಿಲಯ
ಪ್ರಚಾರ ಪುಸ್ತಕಮಾಲೆ—೧೫೯

# ಕಾರೋಲಸ್ ಲಿನೆಯಸ್

ಎಚ್. ಕೆ. ಮಲ್ಲಿಕಾರ್ಜುನಪ್ಪ, ಎಂ.ಎಸ್‌ಸಿ.,

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
೧೯೬೮

ಮೊದಲನೆಯ ಮುದ್ರಣ : ೧೯೬೮
೩೦೦೦ ಪ್ರತಿಗಳು



ಪ್ರಕಾಶಕರು :
ಡೈರೆಕ್ಟರ್, 'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು-೬.

ಬೆಲೆ :
ಸಾಧಾರಣ ಪ್ರತಿ ೨೫ ಪೈಸೆ
ಉತ್ತಮ ಪ್ರತಿ ೩೭ ಪೈಸೆ

ಮುದ್ರಕರು :
ಶ್ರೀ ಮೀರಾ ಪ್ರಿಂಟರ್ಸ್
ಶಿವರಾಂಪೇಟೆ, ಮೈಸೂರು.

# ಮುನ್ನುಡಿ

ನಮ್ಮ ವಿಶ್ವವಿದ್ಯಾನಿಲಯದ ಮೊದಲನೆಯ ಛಾನ್ಸಲರೂ ಆಳಿದ ಮಹಾಸ್ವಾಮಿಯವರೂ ಆದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು ಮೊದಲನೆಯ 'ಸೆನೆಟ್' ಸಭೆಯ ಪ್ರಾರಂಭೋತ್ಸವ ಸಮಯದಲ್ಲಿಯೂ ಮೊದಲನೆಯ 'ಕಾನ್ವೊಕೇಷನ್' ಸಮಾರಂಭದ ಕಾಲದಲ್ಲಿಯೂ ವಿಶ್ವವಿದ್ಯಾನಿಲಯದ ವಿದ್ಯೆ ಪಟ್ಟಣಗಳಲ್ಲಿ ಮಾತ್ರ ಕೇಂದ್ರೀಕೃತವಾಗದೆ ನಾಡಿನ ಮೂಲೆ ಮೂಲೆಗೂ ಪ್ರಸರಿಸಿ, ಉಚ್ಚ ಶಿಕ್ಷಣವನ್ನು ಪಡೆಯಲು ಅವಕಾಶಹೊಂದದ ಸಾಮಾನ್ಯ ಜನರ ಹೃದಯವನ್ನು ಬೆಳಗಿಸಿ ಸಮಷ್ಟಿ ಪ್ರಜ್ಞೆಯ ವಿಕಾಸಕ್ಕೆ ಕಾರಣವಾಗಬೇಕು ಎಂಬ ಮಹಾದಾಶೆಯನ್ನು ವ್ಯಕ್ತಪಡಿಸಿದ್ದರು. ಅವರ ಆಶೆಯು ಇಂದು ಫಲದಾಯಕವಾಗುತ್ತಿದೆ. ನಮ್ಮ ವಿಶ್ವವಿದ್ಯಾನಿಲಯದ ಪ್ರಸಾರಾಂಗ ನಾಡಿನ ಮೂಲೆ ಮೂಲೆಯಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ, ಸಂಸ್ಕೃತಿ ಪ್ರಸಾರ ಕಾರ್ಯವನ್ನು, ಬಹಳ ಸಮರ್ಪಕವಾದ ರೀತಿಯಲ್ಲಿ ನೆರವೇರಿಸುತ್ತಿದೆ.

ಜನರು ಬಯಸಿದೆಡೆಗಳಲ್ಲಿ ಈ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಅನೇಕ ವರ್ಷಗಳು ಪಾಠ ಹೇಳಿ ಮಿಗಿಲಾದ ಜ್ಞಾನವನ್ನು ಗಳಿಸಿರುವ ಘನ ವಿದ್ವಾಂಸರು ಜನರು ಅಪೇಕ್ಷಿಸುವ ವಿಷಯಗಳನ್ನು ಕುರಿತು ಸರಳವೂ ಸುಲಭ ಗ್ರಾಹ್ಯವೂ ಆದ ಕನ್ನಡ ಭಾಷೆಯ ಮೂಲಕ ತಿಳುವಳಿಕೆ ಕೊಡುತ್ತಾರೆ ಜ್ಞಾನವನ್ನು ಹಂಚುವುದರಲ್ಲೂ ಆನಂದವಿದೆ. ಅಧ್ಯಾಪಕವೃಂದದವರು ಹಳ್ಳಿಗಳಲ್ಲಿಯೇ ಒಂದೆ

ರಡು ದಿನಗಳು ನೆಲೆಸಿ, ಸಾಮಾನ್ಯ ಜನರಂತೆಯೇ ಇದ್ದು ಕೊಂಡು, ಗಳಿಸಿರುವ ಜ್ಞಾನವನ್ನು ಜನ ಸಾಮಾನ್ಯರ ಹೃದಯ ದಲ್ಲಿ ಬಿತ್ತಿ, ತಾವೂ ಆನಂದವನ್ನು ಅನುಭವಿಸುತ್ತಾರೆ ಮತ್ತು ಇತರರಿಗೂ ಆನಂದವನ್ನುಂಟುಮಾಡುತ್ತಾರೆ. ಈ ಉಪ ನ್ಯಾಸಗಳು ವಿಶ್ವವಿದ್ಯಾನಿಲಯದ ಮೆಟ್ಟಲನ್ನು ಹತ್ತಲು ಅವ ಕಾಶವಿಲ್ಲದವರಿಗೆ ವಿಶ್ವವಿದ್ಯಾನಿಲಯದ ವಿದ್ಯೆಯ ಸೌಲಭ್ಯ ವನ್ನು ನೀಡಲು ನೆರವಾಗುತ್ತವೆ. ವಿಶ್ವವಿದ್ಯಾನಿಲಯದಲ್ಲಿ ಜ್ಞಾನವನ್ನು ಗಳಿಸಿ ನಾಡಿನ ಬೇರೆ ಬೇರೆ ಭಾಗಗಳಲ್ಲಿ ವಿವಿಧ ಕಾರ್ಯರಂಗದಲ್ಲಿ ನಿರತರಾಗಿರುವ ಜನರಿಗೆ ಮಾರ್ಗದರ್ಶಕ ವಾಗುತ್ತವೆ. ನಮ್ಮ ಸಮಾಜದಲ್ಲಿನ ಭೇದಭಾವಗಳನ್ನು ಹೋಗಲಾಡಿಸಿ ಸಮಾನತೆಯನ್ನು ಸ್ಥಾಪಿಸಲು ಸಹಾಯಕ ವಾಗುತ್ತವೆ; ವಿಶ್ವವಿದ್ಯಾನಿಲಯಕ್ಕೂ ಸಾಮಾನ್ಯ ಜನತೆಗೂ ಮಧ್ಯೆ ಇರುವ ದೊಡ್ಡ ಅಂತರವನ್ನು ಪರಿಹರಿಸಲು ನೆರವಾಗು ತ್ತವೆ; ಜನರಲ್ಲಿ ಜ್ಞಾನೋದಯವನ್ನುಂಟುಮಾಡಿ, ದುಃಖಕ್ಕೆ ಮೂಲಕಾರಣವಾದ ಅಸಮಾನತೆಯನ್ನು ಹೋಗಲಾಡಿಸಿ, ವಿಶಾಲಭಾವನೆ ಮೂಡುವಂತೆ ಮಾಡುತ್ತವೆ.

ಪ್ರಚಾರೋಪನ್ಯಾಸಗಳನ್ನು ಕಿರುಹೊತ್ತಗೆಗಳ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಈ ಉಪನ್ಯಾಸಗಳನ್ನು ಕೇಳಲು ಅವ ಕಾಶ ಸಿಕ್ಕದವರು ಈ ಹೊತ್ತಗೆಗಳನ್ನು ಕೊಂಡು, ಓದಿ ತಿಳು ವಳಿಕೆ ಪಡೆಯಲು ಅವಕಾಶವಿದೆ. ಈ ಮಾಲೆಯ ಪುಸ್ತಕಗಳು ಹೆಚ್ಚು ಜನಪ್ರಿಯವಾಗಿವೆ. ಪುಸ್ತಕಗಳು ಅಚ್ಚಿನ ಮನೆಯಿಂದ ಹೊರಬಿದ್ದ ಕೂಡಲೆ ಜನರು ಆದರದಿಂದ ಕೊಂಡು ಓದುತ್ತಾರೆ. ಈ ಮಾಲೆಯಲ್ಲಿ ಈಗಾಗಲೇ ಭೌತ ವಿಜ್ಞಾನ, ರಸಾಯನ ವಿಜ್ಞಾನ, ಪ್ರಾಣಿ ವಿಜ್ಞಾನ, ವೈದ್ಯ ವಿಜ್ಞಾನ, ಗಣಿತ ವಿಜ್ಞಾನ,

ಸಮಾಜ ವಿಜ್ಞಾನ, ಅರ್ಥಶಾಸ್ತ್ರ, ತತ್ತ್ವಶಾಸ್ತ್ರ, ಸಾಹಿತ್ಯ ಮತ್ತು ಕಲೆ, ಮುಂತಾದ ವಿಷಯಗಳನ್ನು ಕುರಿತ ನೂರ ಐವತ್ತ ಒಂಭತ್ತು ಪುಸ್ತಕಗಳು ಪ್ರಕಟವಾಗಿವೆ ಎಂಬುದನ್ನು ತಿಳಿಸಲು ನನಗೆ ಬಹಳ ಸಂತೋಷವಾಗುತ್ತದೆ.

ಈ ಮಾಲೆಯಲ್ಲಿ ಈಗ ಹೊರಬೀಳುತ್ತಿರುವ ಶ್ರೀ ಎಚ್. ಕೆ. ಮಲ್ಲಿಕಾರ್ಜುನಪ್ಪ ಅವರ 'ಕಾರೋಲಸ್ ಲಿನೆಯುಸ್' ಹೆಚ್ಚು ಜನಪ್ರಿಯವಾಗಲೆಂದು ನಾನು ಆಶಿಸುತ್ತೇನೆ.

ಮೈಸೂರು
೨-೯-೧೯೬೮

ಕೆ. ಎಲ್. ಶ್ರೀಮಾಲಿ
ವೈಸ್-ಛಾನ್ಸಲರ್

# ಮುನ್ನುಡಿ

ಶ್ರೀಮಾನ್ ಮಲ್ಲಿಕಾರ್ಜುನಪ್ಪನವರು ಪ್ರಕೃತಿ ವಿಜ್ಞಾನ ಶಾಸ್ತ್ರದಲ್ಲಿ ಹಲವಾರು ವೈಜ್ಞಾನಿಕ ಪ್ರಬಂಧಗಳನ್ನು, ಲೇಖನ ಗಳನ್ನು ಬರೆದು ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಿ ಕನ್ನಡಿಗರಿಗೆ ಪರಿಚಿತರಾಗಿದ್ದಾರೆ. ಇವರು ಈಗ ಬರೆದಿರುವ 'ಕಾರೋಲಸ್ ಲಿನೆಯಸ್' ಒಂದು ಉತ್ತಮ ಕೃತಿಯಾಗಿದೆ.

ಕಾರೋಲಸ್ ಲಿನೆಯಸ್ ಒಬ್ಬ ಸುಪ್ರಸಿದ್ಧ ವಿಜ್ಞಾನಿ ಹಾಗೂ ಒಬ್ಬ ಆದರ್ಶ ಅಧ್ಯಾಪಕ. ಇಂದಿನ ಜೀವಶಾಸ್ತ್ರದ ಸುಪ್ರಸಿದ್ಧ 'ದ್ವಿನಾಮ ಪದ್ಧತಿ'ಯ ಜನ್ಮದಾತ ಈತನೇ ಆಗಿ ದ್ದಾನೆ. ಜಗತ್ತಿನಲ್ಲಿ ಜೀವಿಸುವ ಪ್ರತಿಯೊಂದು ಬಗೆಯ ಜೀವಿ ಯನ್ನು ತನ್ನದೇ ಆದ ದ್ವಿನಾಮ ಪದ್ಧತಿಯ ನಾಮಕರಣಕ್ಕೆ ಒಳಪಡಿಸಿ ಈತ ಪ್ರಕೃತಿ ವಿಜ್ಞಾನಕ್ಕೆ ಮಾಡಿರುವ ಸೇವೆ ನಿಜಕ್ಕೂ ಪ್ರಶಂಸನಾರ್ಹ. ಈತನ ವಿದ್ವತ್ಪೂರ್ಣ ಹಾಗೂ ಪ್ರಭಾವ ಪೂರಿತ ಗ್ರಂಥಗಳು ಹಾಗೂ ಲೇಖನಗಳು ಇವನಿಗೆ ವಿಜ್ಞಾನ ಪ್ರಪಂಚದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿಕೊಟ್ಟಿವೆ. ಇಂಥ ಆದರ್ಶ ವಿಜ್ಞಾನಿಯ ಬಗ್ಗೆ ಅರಿಯುವುದು ಪ್ರತಿಯೊಬ್ಬ ಜೀವ ವಿಜ್ಞಾನದ ವಿದ್ಯಾರ್ಥಿಯ ಅಮೂಲ್ಯ ಕರ್ತವ್ಯವಾಗಿದೆ. ಈತನ ವಿಷಯವನ್ನು ವಿದ್ಯಾರ್ಥಿಗಳು ಸಂಕ್ಷಿಪ್ತವಾಗಿ ಪಠ್ಯ ಪುಸ್ತಕಗಳ ಮೂಲಕ ತಿಳಿದುಕೊಂಡಿದ್ದರೂ ಪಠ್ಯ ಪುಸ್ತಕ ಗಳಲ್ಲಿಲ್ಲದ ಎಷ್ಟೋ ವಿಷಯಗಳನ್ನು ಶ್ರೀಮಾನ್ ಮಲ್ಲಿಕಾರ್ಜುನಪ್ಪ ನವರು ಸಂಗ್ರಹಿಸಿ ಈ ಲೇಖನವನ್ನು ಬರೆದು ಕನ್ನಡಿಗರಿಗೆ ಈ ಮಹಾ ವಿಜ್ಞಾನಿಯ ಪರಿಚಯ ಮಾಡಿಕೊಳ್ಳಲು ಒಂದು ಸದವಕಾಶ ಕಲ್ಪಿಸಿದ್ದಾರೆ. ಇನ್ನೂ ಮುಂದೆ ಇವರೂ, ಇವ

ರಂತೆಯೇ ಇನ್ನಿತರ ತರುಣ ವಿಜ್ಞಾನಿಗಳೂ, ಅಧ್ಯಾಪಕರೂ ಮುಂದೆ ಬಂದು ವಿಜ್ಞಾನದಲ್ಲಿ ವಿಚಾರ ಪೂರಿತ ಹಾಗೂ ಜನ ಪ್ರಿಯ ಲೇಖನಗಳನ್ನು ಬರೆದು ವೈಜ್ಞಾನಿಕ ಸಂಪತ್ತು ಕನ್ನಡದಲ್ಲಿ ಹೆಚ್ಚುವಂತೆ ಮಾಡಿ ಕನ್ನಡಿಗರಿಗೆ ಇಂಥ ಮಹಾ ವಿಜ್ಞಾನಿಗಳ ಪರಿಚಯ ಮಾಡಿಕೊಡಲೆಂದು ನಾನು ಹಾರೈಸುತ್ತೇನೆ.

ಮೇಲ್ಪಂಕ್ತಿಯ ಇಂತಹ ಉತ್ತಮ ಬರೆಹಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದವರು ಉದಾರ ಮನಸ್ಸಿನಿಂದ ಪ್ರಕಟಿಸಿ ಸಾಮಾನ್ಯ ಜನತೆ ವಿಜ್ಞಾನದ ಪರಿಚಯ ಮಾಡಿಕೊಳ್ಳುವಂತೆ ಮಾಡಿ, ಇಂತಹ ಮಹಾ ವಿಜ್ಞಾನಿಗಳ ಜೀವನ, ಆದರ್ಶ ಹಾಗೂ ಮಹತ್ಸಾಧನೆಗಳಿಂದ ಕನ್ನಡದ ವಿದ್ಯಾರ್ಥಿವೃಂದ ಸ್ಫೂರ್ತಿ ಪಡೆಯುವಂತೆ ಮಾಡಿ ವಿಜ್ಞಾನದ ಮುನ್ನಡೆಗೆ ನೆರವಾಗಿದ್ದಾರೆ. ಇವರ ಅಮೋಘ ಸೇವೆ ನಿಜಕ್ಕೂ ಪ್ರಶಂಸನಾರ್ಹ ಮತ್ತು ಅಭಿನಂದನಾರ್ಹ.

**ಕ. ನ. ನಾರಾಯಣ್**

# ಕಾರೋಲಸ್ ಲಿನೆಯಸ್

ಕಾರೋಲಸ್ ಲಿನೆಯಸ್ ಜನಿಸಿ ೧೯೭೭ನೇ ಇಸವಿ ಮೇ ತಿಂಗಳಿಗೆ ೨೭೦ ವರ್ಷಗಳು ಸಂದು ಹೋದುವು. ಆತನ ಇನ್ನೂರ ಅರವತ್ತನೇ ಜಯಂತ್ಯುತ್ಸವ ಅಂತರರಾಷ್ಟ್ರೀಯ ವಿಜ್ಞಾನರಂಗದಲ್ಲಿ ಆಚರಿಸಲ್ಪಡದೆ ಸ್ವೀಡನ್‌ನಲ್ಲೇ ಸರಳವಾಗಿ ನಡೆದುಹೋಯಿತು. ಆದರೂ ಅದಕ್ಕಾಗಿ ಪ್ರಕೃತಿ ವಿಜ್ಞಾನ ಪ್ರಿಯರು ವಿಷಾದ ಪಡಬೇಕಾದುದಿಲ್ಲ. ಲಿನೆಯಸ್‌ನ ಹೆಸರು ಚಿರಸ್ಮರಣೀಯ. ಆತ ನಡೆಸಿದ ಮಹತ್ ಸಂಶೋಧನೆಗೆ ಲಂಡನ್‌ನಲ್ಲಿರುವ ಜಗದ್ವಿಖ್ಯಾತ ಲಿನೆಯನ್ ಸೊಸೈಟಿಯೇ ಸಾಕ್ಷಿಯಾಗಿದೆ.

ಲಿನೆಯಸ್ ಸ್ವೀಡನ್ನಿನವನಾದರೂ ಆತ ಇಂದು ವಿಶ್ವ ಮಾನವ. ಆತ ಜೀವಿಸಿದ್ದಾಗಲೇ, ಅನೇಕ ಮುಂದುವರಿದ ರಾಷ್ಟ್ರಗಳಲ್ಲಿ ಲಿನೆಯಸ್ ಜನಪ್ರಿಯನಾಗಿದ್ದನು. ಉತ್ತರ ಅಮೆರಿಕೆಯಲ್ಲಿ ಆತನ ಅನುಯಾಯಿಗಳು ಅನೇಕರಿದ್ದರು. ಆತನ ಅನೇಕ ಬರಹಗಳು ಜಾವಾದ ಬಟಾವಿಯಾ (Batawia) ದಲ್ಲೂ ಪ್ರಕಟವಾಗಿವೆ. ಉಪ್ಪಸಾಲಾ ವಿಶ್ವ ವಿದ್ಯಾನಿಲಯದಲ್ಲಿ ಆತನಿಂದ ವಿದ್ಯಾರ್ಜನೆ ಮಾಡಿ ಬಂದ ವಿದ್ಯಾರ್ಥಿಗಳು ದಕ್ಷಿಣ ಆಫ್ರಿಕಾದ ಉತ್ತರಕ್ಕಿರುವ ಸ್ಪಿಟ್ಸ್‌ಬರ್ಗರ್ (Spitzberger) ವರೆಗೂ, ಪಾಶ್ಚಿಮಾತ್ಯ ದೇಶಗಳಲ್ಲಿ ಕೆನಡಾ ದಿಂದ ಆರಂಭವಾಗಿ ಪೌರ್ವಾತ್ಯ ದೇಶವಾದ ಜಪಾನ್‌ವರೆಗೂ ಹರಡಿ-ಹಂಚಿ ಹೋಗಿದ್ದಾರೆ. ಹೀಗಾಗಿ ಲಿನೆಯಸ್ ಹೆಸರು ಅರಿಯದ ಪ್ರಕೃತಿ ವಿಜ್ಞಾನಪ್ರಿಯರು ಪ್ರಪಂಚದ ಯಾವ ಮೂಲೆಯಲ್ಲೂ ಇಲ್ಲ.

ಲಿನೆಯಸ್‌ನ ಜೀವಿತಕಾಲ(೧೭೦೭-೧೭೭೮) ಸ್ವೀಡನ್‌ನ ರಾಜಕೀಯ ಚರಿತ್ರೆಯಲ್ಲೇ ಅತ್ಯಂತ ತೊಯಲಾಟಕ್ಕೆ ಸಿಕ್ಕಿದ್ದ ಕಾಲವಾಗಿತ್ತು. ೧೭೧೮ ರಲ್ಲಿ ೧೨ನೇ ಚಾರ್ಲ್ಸ್ (Charles XII) ದೊರೆ ಸತ್ತನಂತರ ನೆರೆ ರಾಷ್ಟ್ರಗಳು ಸ್ವೀಡನ್ನಿನ ಮೇಲೆ ಆಕ್ರಮಣ ನಡೆಸಿದುವು. ಇದರ ಫಲವಾಗಿ ಸಾಗರದಾಚೆಯ ಎಷ್ಟೋ ನೆಲೆಗಳು ಸ್ವೀಡನ್ನಿನ ಕೈ ತಪ್ಪಿಹೋದವು. ಕೊನೆಗೆ ಸ್ವೀಡನ್ನಿಗೆ ಫಿನ್‌ಲೆಂಡ್ (Finland) ಮತ್ತು ಪೊಮೆರಾನಿಯಾ (Pomerania) ದ ಕೆಲವು ಭಾಗಗಳು ಮಾತ್ರ ಉಳಿದುಕೊಂಡುವು.

12ನೇ ಚಾರ್ಲ್ಸ್ ಗತಿಸಿದ ನಂತರ ಕ್ರಾಂತಿ ನಡೆದು ರಾಜ್ಯಾಂಗವೇ ಪೂರ್ಣವಾಗಿ ಬದಲಾವಣೆ ಹೊಂದಿತು. ಅರಸೊತ್ತಿಗೆಯ ಅಧಃಪತನವಾಗಿ ಪಾರ್ಲಿಮೆಂಟರಿ ಸರಕಾರ ರಚನೆಯಾಯಿತು. ಎಲ್ಲಾ ಅಧಿಕಾರವೂ "ನಾಲ್ಕು ಎಸ್ಟೇಟ್" ಗಳಲ್ಲಿ (Four Estates) ಕೇಂದ್ರೀಕೃತವಾಗಿ, ನೋಬೆಲ್ ಗಳ ಒಂದು ಮಂತ್ರಿಮಂಡಲ ರಚನೆಯಾಯಿತು ಈ ಅವಧಿಯಲ್ಲಿ ದೇಶ ಪಕ್ಷರಾಜಕೀಯದಿಂದ ಮುಕ್ತಿಹೊಂದಿ, ಜನಜೀವನ ಸುಧಾರಿಸಿ, ಸ್ವೀಡನ್ ಸುಖೀರಾಜ್ಯವಾಗುವುದನ್ನು ನೋಡಲೋಸುಗ ಲಿನೆಯಸ್ ಬದುಕಿದ್ದನು. ಅನೇಕ ವರ್ಷಗಳ ನಂತರ ಮೂರನೇ ಗುಸ್ಟವ್ ಅಧಿಕಾರಕ್ಕೆ (Gustav III) ಬಂದಾಗ ಅರಸೊತ್ತಿಗೆ ಪುನಃ ಆರಂಭವಾಯಿತು.

ಎಸ್ಟೇಟ್ಸ್ ಸರಕಾರದ ರಾಜ್ಯಭಾರದ ಕಾಲವನ್ನು ಇತಿಹಾಸಕಾರರು "ಸ್ವಾತಂತ್ರ್ಯಯುಗ" ಎಂದು ಕರೆದಿದ್ದಾರೆ. ೧೭ ನೇ ಶತಮಾನದ ನಂತರ ಸ್ವೀಡನ್ ದೇಶ ಕ್ಷೇತ್ರ ವಿಸ್ತಾರವಾಗಿ ಆರ್ಥಿಕ ಮತ್ತು ಸಾಂಸ್ಕೃತಿಕವಾಗಿ ಮುಂದುವರಿಯಿತು.

ಲಿನೆಯಸ್ ಬದುಕಿದ್ದ ಕಾಲವನ್ನು 'ಪ್ರಕೃತಿ ವಿಜ್ಞಾನದ ಸುವರ್ಣಯುಗ' ವೆಂದು ಕರೆಯಬಹುದು. ಇವನ ಸಮಕಾಲೀನ ರಾಗಿ ಅನೇಕ ಖ್ಯಾತ ವಿಜ್ಞಾನಿಗಳಿದ್ದರು. ಇವರಲ್ಲಿ ಪ್ರಮುಖ ರಾಗಿದ್ದವರೆಂದರೆ ಖಗೋಳ ವಿಜ್ಞಾನಿಯಾಗಿದ್ದ ಸೆಲ್‌ಸಿಯಸ್, (Celsius) ಭೌತಶಾಸ್ತ್ರಜ್ಞನಾದ ಕ್ಲಿಂಗ್ ಸ್ಟೈಯಿರ್ನಾ (Klingestierna) ರಸಾಯನ ವಿಜ್ಞಾನಿಗಳಾದ ಟೋರ್ ಬರ್ನ್, (Torebern) ಮತ್ತು ಬರ್ಗ್‌ಮನ್ (Bergman), ಷೀಲ್, (Scheele). ಆ ವೇಳೆಗಾಗಲೇ ಸ್ವೀಡನ್ ಅಂತರರಾಷ್ಟ್ರೀಯ ವ್ಯಾಪಾರವನ್ನು ಆರಂಭಿಸಿ ಲೇವೆಂಟ್ (Levant) ಮತ್ತು ಚೈನಾ ದೇಶಗಳಿಗೆ ಹಡಗುಗಳನ್ನು ಕಳಿಸುತ್ತಿತ್ತು. ಇದರಿಂದಾಗಿ ಲಿನೆಯಸ್ ತನ್ನ ಶಿಷ್ಯರನ್ನು ಅನ್ವೇಷಣಾರ್ಥವಾಗಿ ಇತರ ದೇಶಗಳಿಗೂ ಕಳಿಸಲು ತುಂಬಾ ಅನುಕೂಲವಾಯಿತು.

## ಬಾಲ್ಯ, ವಿದ್ಯಾಭ್ಯಾಸ

ಲಿನೆಯಸ್ ೧೭೦೭ನೇ ಇಸವಿ ಮೇ ೧೩ ರಂದು ದಕ್ಷಿಣ ಸ್ವೀಡನ್ನಿನ ಸ್ಮಾಲ್ಯಾಂಡ್ ಪ್ರಾಂತ್ಯದ ರಾಸಲ್ಟ್ ಎಂಬ ಹಳ್ಳಿ ಯಲ್ಲಿ ಜನ್ಮವೆತ್ತಿದನು. ಅನೇಕ ಸ್ವೀಡಿಷ್ ವಿದ್ವಾಂಸರಂತೆಯೇ ಲಿನೆಯಸ್ ಸಹ ಒಂದು ಸಾಮಾನ್ಯ ರೈತ ಕುಟುಂಬದಿಂದಲೇ ಬಂದವನಾಗಿದ್ದಾನೆ. ಲಿನೆಯಸ್ ವಂಶ ಸ್ವೀಡನ್ನಿನ ಒಂದು ಶುದ್ಧ ರೈತ ತಳಿಯ ಸಂತತಿಯದು. ಲಿನೆಯಸ್‌ನ ತಂದೆ ಒಬ್ಬ ಕ್ರೈಸ್ತಪಾದ್ರಿಯಾಗಿದ್ದನು. ಹುಡುಗನಾಗಿದ್ದಾಗ ಲಿನೆಯಸ್ ಅಷ್ಟೊಂದು ಚುರುಕಾಗಿರಲಿಲ್ಲ. ಇದರಿಂದಾಗಿ ಅಂದು ಅವನನ್ನು ನೋಡಿದವರಾರೂ ಆತ ಮುಂದೊಬ್ಬ ಮಹಾ ಜೀವಶಾಸ್ತ್ರಜ್ಞನಾಗುತ್ತಾನೆಂದು ನಂಬಿರಲಿಲ್ಲ.

ಬಾಲಕನಾಗಿದ್ದು ತಂದೆಯೊಡನೆ ಚರ್ಚ್‌ಗೆ ಹೋಗುತ್ತಿದ್ದಾಗಲೇ ಆತನಿಗೆ ಒಂದು ಲ್ಯಾಟಿನ್ ನಾಮಕರಣ ಮಾಡಲಾಯಿತು. ಆತನ ತಂದೆಗೂ ನಿಲ್ಸ್ ಇಂಜರ್‌ಮಾರ್ಸನ್ (Nils Ingermarson) ಎಂಬ ಲ್ಯಾಟಿನ್ ಹೆಸರಿತ್ತು. ಲಿನೆಯಸ್ ಎಂಬುದು ಆತನೇ ಇಟ್ಟುಕೊಂಡ ಹೆಸರು. ಇದು ಸಾಂಪ್ರದಾಯಿಕವಾಗಿ ಬಂದದ್ದು. ಇದಕ್ಕೆ ಕಾರಣವೆಂದರೆ ಅವರ ಮನೆಯ ಮುಂದೆ ಒಂದು ದೊಡ್ಡ ನಿಂಬೆ ಮರವಿತ್ತು. (Lind-Swedish, in Latin-Tilia) ಆತನ ಚಿಕ್ಕಪ್ಪನೊಬ್ಬನು-ಟೀಲಿಯಾಂಡರ್ (Tiliandar) ಎಂಬ ಅದೇ ಮರದ ನಾಮಾಂಕಿತನಾಗಿದ್ದನು.

ಆತನ ತಾಯಿ ಒಂದು ಗುಮಾಸ್ತೆಯ ಕುಟುಂಬದಿಂದ ಬಂದವಳಾಗಿದ್ದಳು. ಆತನ ತಂದೆಯ ನಿಜ ನಾಮಧೇಯ-ನಿಲ್ಸ್ ಲಿನೆಯಸ್ (Nils Linnaeus) ಲಿನೆಯಸ್‌ನ ಮಾವ ತೀರಿಕೊಂಡನಂತರ ಆತನ ತಂದೆ ಪಾದ್ರಿಯಾಗಿ ಆತನ ಮಾವನ ಉತ್ತರಾಧಿಕಾರಿಯಾಗಿ ವಾಕ್ಸ್‌ಜೋ (Vaxjo) ನಗರಕ್ಕೆ ತೆರಳಬೇಕಾಗಿ ಬಂತು.

ಮನೆತನದ ಸಂಪ್ರದಾಯ ಲಿನೆಯಸ್‌ನ ಬಾಲ್ಯಜೀವನದ ಮೇಲೆ ತುಂಬಾ ಗಣನೀಯವಾದ ಪ್ರಭಾವ ಬೀರಿತೆನ್ನಬಹುದು. ಆತನ ತಂದೆ ಚರ್ಚ್ ಕಾರ್ಯ ಮುಗಿದ ನಂತರ ಪ್ರಕೃತಿಯಲ್ಲಿ ಆಡ್ಡಾಡಿ ಬರುತ್ತಿದ್ದನಲ್ಲದೆ ತನ್ನ ಬಾಲಕ ಲಿನೆಯಸ್‌ನನ್ನು ಅರಣ್ಯದೊಳಕ್ಕೆ ಜೊತೆಯಲ್ಲಿ ಕರೆದುಕೊಂಡು ಹೋಗಿ ಪ್ರಕೃತಿ ಸೊಬಗು ಸೌಂದರ್ಯವನ್ನು ವರ್ಣಿಸುವುದರ ಜೊತೆಗೆ, ಸಸ್ಯದಲ್ಲಿರುವ ಕಾಂಡ, ಎಲೆ, ಹೂ, ಹಣ್ಣು ಮುಂತಾದ ಭಾಗಗಳನ್ನು ಕಲಾತ್ಮಕವಾಗಿ ವಿವರಿಸುತ್ತಿದ್ದನು. ಆಗಾಗ

ಗಿಡಗಳಿಗಿರುವ ಲ್ಯಾಟಿನ್ ಭಾಷೆಯ ಹೆಸರನ್ನು ಲಿನೆಯಸ್‌ನಿಗೆ ಹೇಳಿ ಕೊಡುತ್ತಿದ್ದನು. ಲಿನೆಯಸ್‌ನ ತಂದೆ ಪ್ರಕೃತಿ ದೇವತೆಯ ಆರಾಧಕನಾಗಿದ್ದನಲ್ಲದೆ ಸೌಂದರ್ಯದ ಉಪಾಸಕನೂ ಆಗಿದ್ದನು. ಇದಕ್ಕೆ ಆತ ಬೆಳೆಸಿದ್ದ ನೂರಾರು ಬಗೆಯ ಹೂಗಿಡಗಳ ತೋಟವೇ ನಿದರ್ಶನವಾಗಿತ್ತು.

ಲಿನೆಯಸ್‌ನಿಗೆ ಪ್ರಕೃತಿ ಸೃಷ್ಟಿಯ ಅಧ್ಯಯನದಲ್ಲಿ ಆಸಕ್ತಿಯುಂಟಾಗಲು ಆತನ ತಂದೆ ಬೆಳೆಸಿದ್ದ ವೈವಿಧ್ಯಮಯ ಹೂ ತೋಟವೇ ಕಾರಣವೆನ್ನಬಹುದು. ಒಮ್ಮೆ ಲಿನೆಯಸ್ "ಈ ಹೂದೋಟವೇ ನನಗೆ ಆತ್ಮಾನಂದವನ್ನುಂಟುಮಾಡಿ, ಗಿಡಗಳಮೇಲೆ ನನ್ನ ಪ್ರೇಮ ಅಚಲವಾಗಲು ಸ್ಫೂರ್ತಿ ನೀಡಿತು" ಎಂದು ಹೇಳಿದ್ದಾನೆ. ಮಿಗಿಲಾಗಿ ಚರ್ಚ್ ನಿರ್ಮಿತವಾಗಿದ್ದ ಪ್ರದೇಶವೂ ಸುಂದರವಾದ ಮಾಕ್ಲೀ (Moklen) ಸರೋವರದ ದಡದಲ್ಲಿದ್ದು, ಸುತ್ತಲೂ ಓಕ್ ಮತ್ತು ಬೀಚ್ ಮರಗಳು ದಟ್ಟವಾಗಿ ಬೆಳೆದುಕೊಂಡಿದ್ದು, ನೆಲ ಹಸುರಾಗಿ ಸೌಂದರ್ಯದ ಆಗರವಾಗಿದ್ದುದೂ ಲಿನೆಯಸ್ ಪ್ರಕೃತಿ ಪ್ರೇಮಿಯಾಗಲು ಕಾರಣವಾಯಿತು.

ಅಂದು ವಿಜ್ಞಾನಿಗಳು ಪ್ರಾಣಿಗಳ ಮತ್ತು ಸಸ್ಯಗಳ ಜೀವನ ಚರಿತ್ರೆಯನ್ನು ತಿಳಿಯಬೇಕಾಗಿದ್ದರೆ ಪ್ರಕೃತಿ ಪ್ರವೇಶ ಮಾಡಿ ನೇರವಾಗಿ ಅಧ್ಯಯನ ನಡೆಸಬೇಕಾಗಿತ್ತು. ಏಕೆಂದರೆ ಅವರಿಗೆ ೩೦೦೦ ವರ್ಷಗಳ ಹಿಂದೆಯೇ ಬರೆದಿದ್ದ ಗ್ರೀಕ್ ಆಧಾರ ಗ್ರಂಥವನ್ನೊಂದು ಬಿಟ್ಟರೆ ಮತ್ತಾವ ಆಧಾರ ಗ್ರಂಥಗಳೂ ಇರಲಿಲ್ಲ. ಬಾಲಕ ಲಿನೆಯಸ್‌ನಿಗಂತೂ ತಂದೆಯೇ ಸಸ್ಯಶಾಸ್ತ್ರದ ಅಧ್ಯಯನಕ್ಕೆ ಪ್ರಥಮ ಗುರುವಾಗಿ, ಪ್ರಕೃತಿಯೇ ಪ್ರಯೋಗ ಶಾಲೆಯಾಯಿತು.

ಆತನ ತಂದೆಗೆ ಮಗ ವಿದ್ಯಾವಂತನಾಗುವುದು ಬೇಕಿರಲಿಲ್ಲ ವೆಂದು ತೋರುತ್ತಿತ್ತು. ಆದಕ್ಕಾಗಿಯೋ ಏನೋ ಮನಸ್ಸಿಲ್ಲದ ಮನಸ್ಸಿನಿಂದ ಲಿನೆಯುಸ್‌ನನ್ನು ಲುಂಡ್ (Lund) ವಿಶ್ವ ವಿದ್ಯಾನಿಲಯಕ್ಕೆ ಸೇರಿದ ವಾಕ್ಸ್‌ಜೋ ಶಾಲೆಗೆ ಸೇರಿಸಿದನು. ಕಾರ್ಲ್ ಶಾಲೆಗೆ ಹೋಗುತ್ತಿದ್ದನಾದರೂ ಪಾಠ ಪ್ರವಚನಗಳತ್ತ ಅಷ್ಟೊಂದು ಗಮನವೀಯುತ್ತಿರಲಿಲ್ಲ. ಬೋಧನಾ ಪಾಠಗಳು ಬಹುಪಾಲು ಚರ್ಚ್ ವಿದ್ಯಾರ್ಥಿಗಳಿಗಾಗಿಯೇ ಸಿದ್ಧಪಡಿಸಿದು ವಾಗಿದ್ದುವು ಆತನ ತಂದೆ-ತಾಯಿಗಳು ತಮ್ಮ ಮಗ ಒಂದಲ್ಲೊಂದು ದಿನ ಪಾದ್ರಿಯಾಗಿ ಚರ್ಚ್ ಸೇರಬೇಕೆಂದು ಬಯಸಿದ್ದರು.

ಲಿನೆಯುಸ್‌ನಿಗೆ ಚರ್ಚ್ ಪಾಠಪ್ರವಚನಗಳು ಹಿಡಿಸಲಿಲ್ಲ ವಾಗಿ ಮುಂದೆ ವೈದ್ಯಕೀಯ ವಿದ್ಯೆಯನ್ನು ಕಲಿಯಬೇಕೆಂದು ಮನಸ್ಸು ಮಾಡಿದನು. ಮಗನ ದೃಢಸಂಕಲ್ಪಕ್ಕಾಗಿ ಕಟ್ಟು ಬಿದ್ದು ಆತನ ತಂದೆ-ತಾಯಿಗಳು ವಾಕ್ಸ್‌ಜೋ ನಗರವನ್ನು ಬಿಡಬೇಕಾಯಿತು.

ಆಗ ವೈದ್ಯಕೀಯ ವಿದ್ಯಾಭ್ಯಾಸ ಮಾಡಬೇಕಾದವರು ಸಸ್ಯಶಾಸ್ತ್ರವನ್ನು ಒಂದು ವಿಷಯವನ್ನಾಗಿ ತೆಗೆದುಕೊಂಡು ಅಧ್ಯಯನ ಮಾಡಬೇಕಾಗಿತ್ತು. ಆತ ಶಾಲೆಯಲ್ಲಿದ್ದಾಗಲೇ ಅವನ ಗುರುಗಳಲ್ಲೊಬ್ಬರಾದ ಡಾ|| ರೋತ್‌ಮನ್ (Roth-man) ವೈದ್ಯ ವಿದ್ಯೆಯಲ್ಲಿ ಅಭಿರುಚಿಯಿದ್ದಂತಹ ವಿದ್ಯಾರ್ಥಿ ಗಳಿಗಾಗಿಯೇ ಆ ವಿದ್ಯೆಯನ್ನು ಕಲಿಸಲು ಒಪ್ಪಿಕೊಂಡು ಬೋಧಿ ಸುತ್ತಿದ್ದನು. ಆತ ಅಂದು ತರಗತಿಯಲ್ಲಿ ಬರೆದುಕೊಂಡ ಪ್ರವಚನದ ಟಿಪ್ಪಣಿಗಳು ಇಂದಿಗೂ ಸಾಹಿತ್ಯದ ಅಸಾ ಧಾರಣ ತುಣಕುಗಳಾಗಿ ಉಳಿದುಕೊಂಡಿವೆ. ಸಸ್ಯಶಾಸ್ತ್ರಕ್ಕೆ

ಟೋರ್ನ್‌ಫೋರ್ಟ್ (Tournfort) ಮತ್ತು ವ್ಯಾಲಿಯಂಟ್ (Valliant) ರನ್ನೂ ಶರೀರ ಶಾಸ್ತ್ರಕ್ಕೆ ಬೋಅರ್ ಹ್ಯಾವೆ (Boerhaave) ಯನ್ನೂ ಅಧ್ಯಯನ ಮಾಡಬೇಕಾಗಿತ್ತು.

೧೭೨೭ರಲ್ಲಿ ಲಿನೆಯಸ್ ಶಾಲೆ ಬಿಟ್ಟು, ಅನಂತರ ದಕ್ಷಿಣ ಸ್ವೀಡನ್ನಿನಲ್ಲಿದ್ದ ಲುಂಡ್ ವಿಶ್ವವಿದ್ಯಾನಿಲಯಕ್ಕೆ ಸೇರಿದನು. ಇಲ್ಲಿ ಆತನ ಪುಣ್ಯವಶಾತ್ ಒಳ್ಳೆಯವರೂ, ದಕ್ಷ ಅಧ್ಯಾಪಕರೂ ಮತ್ತು ವೈದ್ಯರಾದ, ಪ್ರಕೃತಿ ವಿಜ್ಞಾನಿಯಾದ ಕಿಲಿಯಾನ್ ಸ್ಟೋಬಿಯಸ್ (Kilian Stobeus) ರೊಡನೆ ಪರಿಚಯವಾಗಿ ಸ್ನೇಹಿತನಾದನು.

ಲುಂಡ್ ವಿಶ್ವವಿದ್ಯಾನಿಲಯಕ್ಕೆ ಸೇರಿದ ಒಂದು ವರ್ಷದ ನಂತರ ಲಿನೆಯಸ್ ಉಪ್ಪಸಾಲ (Uppasala) ವಿಶ್ವವಿದ್ಯಾನಿಲಯಕ್ಕೆ ವರ್ಗವಾದನು. ಉಪ್ಪಸಾಲ ವಿಶ್ವವಿದ್ಯಾನಿಲಯವು ಸ್ವೀಡನ್‌ನಲ್ಲೇ ತುಂಬಾ ಹಳೆಯದಾಗಿದ್ದು ಅಧಿಕ ಸಂಪನ್ಮೂಲಗಳುಳ್ಳ ತುಂಬಾ ಹೆಸರುವಾಸಿಯಾಗಿದ್ದ ವಿಶ್ವವಿದ್ಯಾನಿಲಯವಾಗಿತ್ತು. ಅಲ್ಲಿದ್ದ ಅತ್ಯಂತ ಹಳೆಯ ಸಸ್ಯ ತೋಟ (ಸ್ಥಾಪನೆ: ೧೬೫೫)ವು ಕಡೆಗಾಣಿಸಲ್ಪಟ್ಟಿತ್ತು. ವೈದ್ಯಕೀಯ ವಿದ್ಯೆಯ ವಿಭಾಗದಲ್ಲಿದ್ದ ಇಬ್ಬರೇ ಅಧ್ಯಾಪಕರೂ ವೃದ್ಧರಾಗಿದ್ದರಲ್ಲದೆ, ಇತರ ಅನೇಕ ಕಾರಣಗಳಿಂದಾಗಿ ಪಾಠಪ್ರವಚನಗಳು ತುಂಬಾ ಕೀಳ್ಮಟ್ಟದಲ್ಲಿದ್ದುವು. ಇದರಿಂದಾಗಿ ಲಿನೆಯಸ್ ವಿದ್ಯಾಭ್ಯಾಸಕ್ಕಾಗಿ ಸ್ವಾವಲಂಬಿಯಾಗಬೇಕಾಯಿತು. ಇದು ಒಂದು ರೀತಿಯಲ್ಲಿ ಆತನಿಗೆ ಉಪಯೋಗವಾಯಿತೆನ್ನಬಹುದು. ಕಾರಣ ಆತನ ಪ್ರತಿಭೆ ಬೆಳಕಿಗೆ ಬರಲು ಅವಕಾಶವುಂಟಾಯಿತು.

ಲಿನೆಯಸ್ ತನ್ನ ೨೧ನೇ ವಯಸ್ಸಿನಲ್ಲಿ ತಾನು ಅದುವರೆಗೆ ಗಳಿಸಿದ್ದ ಜ್ಞಾನಾರ್ಜನೆಯ ಫಲವೋ ಎಂಬಂತೆ

ಸಸ್ಯ ಶಾಸ್ತ್ರ ಕುರಿತ ಕಿರು ಸಂಶೋಧನಾ ಗ್ರಂಥವನ್ನು ಬರೆದನು. ಗ್ರಂಥದ ಹೆಸರೇ ಕಾವ್ಯಮಯವಾಗಿತ್ತು. ತನ್ನ ಪ್ರಥಮ ಗ್ರಂಥ "Intrdouction to Floral Nuptials" (ಪುಷ್ಪಗಳ ನಿಷೇಕದ ಪರಿಚಯ) ವನ್ನು ೧೭೩೦ರಲ್ಲಿ ಪ್ರಕಟಿಸಿ, ವಿದ್ವಾಂಸ ಹಾಗೂ ವೇದಾಂತಿಯಾದ ಒಲಫ್ ಸೆಲ್ಸಿಯಸ್ (Olof Celcius) ನಿಗೆ ಅರ್ಪಿಸಿದನು. ಕಾಲಾನಂತರದಲ್ಲಿ ಸೆಲ್ಸಿಯಸ್ ಒಬ್ಬ ಖ್ಯಾತ ಸಸ್ಯಶಾಸ್ತ್ರಜ್ಞನಾದನಲ್ಲದೆ ಲಿನೆಯಸ್‌ನ ಆಪ್ತಮಿತ್ರನಾದನು.

ಈ ಗ್ರಂಥ ಹೊರಬಿದ್ದನಂತರ ಸಸ್ಯಗಳ ಲೈಂಗಿಕಾಂಗಗಳ ಕಾರ್ಯ ತತ್ಪರತೆ ಗೊತ್ತಾಯಿತು. ಪ್ರಾಣಿಗಳಂತೆ ಸಸ್ಯಗಳಲ್ಲೂ ಗಂಡು-ಹೆಣ್ಣುಗಳ ಭೇದವಿದ್ದು. ಹೂವು ಸಸ್ಯ ಜೀವನದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದೂ ಪ್ರತಿಪಾದಿಸಿದನು. ಅಂಡಾಶಯ (Ovary) ವು ಹೂವಿನ ಹೆಣ್ಣು ಭಾಗವೆಂದೂ ಕೇಸರ ದಂಡಗಳು (Stamens) ಗಂಡು ಭಾಗಗಳೆಂದೂ, ಇವೇ ಸಸ್ಯಗಳಲ್ಲಿ ಸಂತಾನೋತ್ಪತ್ತಿ ಮಾಡುವ ಲೈಂಗಿಕಾಂಗ ಗಳೆಂದೂ ವಿವರಿಸಿದನು.

ಆತನ ಪುಷ್ಪಗಳ ನಿಷೇಕದ ಪರಿಚಯವನ್ನು ಕುರಿತ ಗ್ರಂಥ ಒಂದು ವೈಜ್ಞಾನಿಕ ಕಾವ್ಯವಾಗಿದೆ. ಲಿನೆಯಸ್ ಹೂವಿನ ಪುಷ್ಪದಳ ಸಮೂಹ (Corolla) ವನ್ನು ಒಂದು ಕಡೆ ಕಾವ್ಯಮಯವಾಗಿ ಹೀಗೆ ವರ್ಣಿಸಿದ್ದಾನೆ–"ಈ ಅಂದ ಚೆಂದದ ಹೂ ದಳಗಳು ದೈವ ನಿರ್ಮಿತ ಅಲೆಗಳಂತಿದ್ದು, ತಮ್ಮ ಹಾವ ಭಾವಗಳ ಪ್ರದರ್ಶನದೊಡನೆ ಪರಿಮಳ ಬೀರಿ ಕೀಟ ಗಳನ್ನು (ಪತಂಗಗಳು) ಆಕರ್ಷಿಸಿ ಸಸ್ಯದ ವಂಶಾಭಿವೃದ್ಧಿಗೆ ನೆರವಾಗಿವೆ" ಎಂದಿದ್ದಾನೆ.

ಲಿನೆಯಸ್ ಸಸ್ಯಗಳಲ್ಲಿ ಲೈಂಗಿಕಾಂಗಗಳನ್ನು ವಿವರಿಸಿ, ಅವೇ ವಂಶಾಭಿವೃದ್ಧಿಯ ಅಂಗಗಳೆಂದು ಪ್ರತಿಪಾದಿಸಿದ ನಂತರ ವಿಶ್ವವಿಜ್ಞಾನರಂಗದಲ್ಲಿ ಕ್ರಾಂತಿಯ ಒಂದು ಶಕವೇ ಆರಂಭವಾಯಿತೆನ್ನಬಹುದು. ಆತ ವರ್ಣಿಸಿದ ಹೂಗಳ ಕಾರ್ಯತತ್ಪರತೆಯ ಫಲವೇ ನಾವು ಇಂದು ಭೋಗಿಸುತ್ತಿರುವ ಆಹಾರ ಧಾನ್ಯಗಳೂ ಹಾಗೂ ರಸಭರಿತ ಹಣ್ಣುಗಳು !

ಲಿನೆಯಸ್ ಪಾಳು ಬಿದ್ದಿದ್ದ ಉಪ್ಪಸಾಲದ ಒಂದು ಹೂದೋಟವಲ್ಲಿ ಕೆಲವು ಗಿಡಗಳನ್ನು ಪರೀಕ್ಷಿಸಿ ಅಧ್ಯಯನ ಮಾಡುತ್ತಿದ್ದಾಗ, ೧೭೨೯ರ ಒಂದು ಪ್ರಾತಃಕಾಲ ಉಪ್ಪಸಾಲ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಒಲಫ್ ಸೆಲ್‌ಸಿಯುಸ್‌ನ ಗಮನ ಸೆಳೆದನು. ಆ ಎಳೆಯ ಬಾಲಕನ ಹರಿದಬಟ್ಟೆ, ಕೃಶವಾದ ಶರೀರ, ಮೇಲಾಗಿ ಆತನಲ್ಲಿದ್ದ ಸಸ್ಯಶಾಸ್ತ್ರದ ಆಸಕ್ತಿ ಅಭಿರುಚಿಗಳನ್ನು ಕಂಡು ಪ್ರೊ|| ಸೆಲ್‌ಸಿಯಸ್‌ನ ಮನಸ್ಸು ಕರಗಿತು. ಅನಂತರ ಸೆಲ್‌ಸಿಯಸ್ ಲಿನೆಯಸ್‌ನಿಗೆ ಸಾಕಷ್ಟು ಬಟ್ಟೆ ಬರೆಗಳನ್ನು ಹೊಲಿಸಿಕೊಟ್ಟು, ಆತನ ಪ್ರತಿಭೆಯನ್ನು ಮೆಚ್ಚಿ ತನ್ನ ಮನೆಯಲ್ಲೇ ಅತಿಥಿಯಾಗಿ ಇಟ್ಟುಕೊಂಡನು. ಕ್ರಮೇಣ ಲಿನೆಯಸ್ ಸೆಲ್‌ಸಿಯಸ್‌ನ ಅಚ್ಚು ಮೆಚ್ಚಿನ ಶಿಷ್ಯನಾಗಿ ಕೊನೆಗೆ ಪ್ರಾಧ್ಯಾಪಕರ ಗ್ರಂಥ ಭಂಡಾರದ ಮೇಲ್ವಿಚಾರಕನೂ ಆದನು.

ಅಂದು ಸಸ್ಯ ತೋಟದ ಮೇಲ್ವಿಚಾರಕನಾಗಿದ್ದ ಪ್ರೊ || ರುಡ್‌ಬೆಕ್ (Rud Bek) ನನ್ನು ತನ್ನ ಸಹಾಯಕನನ್ನಾಗಿ ನೇಮಿಸಿಕೊಂಡು, ಲಿನೆಯಸ್ ವೈದ್ಯಕೀಯ ವಿದ್ಯಾರ್ಥಿಗಳಿಗೆ ಸಸ್ಯಶಾಸ್ತ್ರವನ್ನು ಬೋಧಿಸಬೇಕೆಂದೂ, ಅದು ಆತನ ಕರ್ತವ್ಯಗಳಲ್ಲೊಂದೆಂದೂ ತೀರ್ಮಾನ ಮಾಡಿದನು. ಗೆಳೆಯ

ಸೆಲ್‌ಸಿಯಸ್‌ನಿಂದ ಲಿನೆಯಸ್‌ನ ಪ್ರತಿಭೆಯನ್ನರಿತ ನಂತರ ರುಡ್‌ಬೆಕ್ ಆತನನ್ನು ತನ್ನ ಮನೆಯಲ್ಲೇ ಇಟ್ಟುಕೊಂಡು ತನಗೆ ತಿಳಿದಿದ್ದ ವೈಜ್ಞಾನಿಕ ಜ್ಞಾನವನ್ನು ಧಾರೆ ಎರೆದನಲ್ಲದೆ, ಜೊತೆಗೂಡಿ ಸಂಶೋಧನೆ ನಡೆಸಿ ತಿಳಿದ ಅನೇಕ ವಿಷಯಗಳ ಮೇಲೆ ಆತನೊಡನೆ ಚರ್ಚಿಸಿ ವಿಚಾರ ವಿನಿಮಯ ಮಾಡಿ ಕೊಳ್ಳುತ್ತಿದ್ದನು.

ಸೆಲ್‌ಸಿಯಸ್‌ನಲ್ಲಿ ವಿದ್ಯಾರ್ಥಿಯಾಗಿದ್ದಾಗ ಲಿನೆಯಸ್ ಆತನ ಮಾರ್ಗದರ್ಶನದಲ್ಲಿ 'ಹೀರೋ ಬಟಾನಿಕಂ' (Heero-Btanicum) ಎಂಬ ಗ್ರಂಥವನ್ನು ಬರೆದನು. ರುಡ್‌ಬೆಕ್‌ನ ನೇತೃತ್ವದಲ್ಲಿದ್ದಾಗ–೧೭೩೦–೩೧ರಲ್ಲಿ ಸಸ್ಯಶಾಸ್ತ್ರದ ಗೌರವ ಅಧ್ಯಾಪಕನಾಗಿದ್ದಾಗ–ಸಸ್ಯಗಳ ಲೈಂಗಿಕಾಂಗಗಳನ್ನು ಅಧ್ಯಯನ ಮಾಡಿದನು. ಸಸ್ಯಗಳಲ್ಲಿರುವ ಅಂಡಾಶಯಗಳು ಮತ್ತು ಕೇಸರದಂಡಗಳ ಸಂಖ್ಯೆ, ಅವುಗಳು ಹೂವಿನಲ್ಲಿ ಹೇಗೆ ಜೋಡಣೆಯಾಗಿವೆ ಎಂಬುದನ್ನು ಆಧರಿಸಿ ಲಿನೆಯಸ್ ಪ್ರಥಮತಃ ಲೈಂಗಿಕಾಂಗಗಳ ವರ್ಗೀಕರಣದ ಹೊಸ ಪದ್ಧತಿಯನ್ನು ಕಂಡುಹಿಡಿದನು. ಆತನ ಲೈಂಗಿಕ ವರ್ಗೀಕರಣ ಪದ್ಧತಿ ಸ್ವಲ್ಪ ಮಟ್ಟಿಗೆ ಅನೈಸರ್ಗಿಕವಾಗಿತ್ತು. ಈ ಸಸ್ಯ ವರ್ಗೀಕರಣ ಪದ್ಧತಿಯು ೧೭೩೦ರಲ್ಲಿ "ಫಂಡಮೆಂಟಾ ಬಟಾನಿಕ" (Fundamenta Botanica) ಎಂಬ ಗ್ರಂಥ ರೂಪದಲ್ಲಿ ಪ್ರಕಟವಾಯಿತು. ಇದರಲ್ಲಿ ಪ್ರಯೋಗದೋಷಗಳಿದ್ದರೂ ೧೯ನೇ ಶತಮಾನದ ಪ್ರಾರಂಭದವರೆಗೂ, ಹೊಸ ನೈಸರ್ಗಿಕ ವರ್ಗೀಕರಣ ಪದ್ಧತಿ ಜಾರಿಗೆ ಬರುವವರೆಗೂ, ಲಿನೆಯಸ್ ವರ್ಗೀಕರಣ ಪದ್ಧತಿಯೇ ವಿಶ್ವದ ಬಹುಪಾಲು ದೇಶಗಳ ಪ್ರಕೃತಿ ವಿಜ್ಞಾನರಂಗದಲ್ಲಿ ಬಳಕೆಯಲ್ಲಿತ್ತು. "ನಾನು ಯಾವು

ದನ್ನು ಕಣ್ಣಾರೆ ಕಂಡು ನಂಬಿರುವೆನೋ ಆ ಆಧಾರದ ಮೇಲೆ ಕರಣ ಮಾಡಿದ್ದೇನೆ'' ಎಂದು ಲಿನೆಯಸ್ ಒಂದು ಕಡೆ ಹೇಳಿ ಕೊಂಡಿದ್ದಾನೆ.

"ನನ್ನ ಗ್ರಂಥವು ಒಂದಾನೊಂದು ಕಾಲಕ್ಕಾದರೂ ಸಸ್ಯ ವಿಜ್ಞಾನಿಗಳಿಗೆಲ್ಲಾ ಬೇಕಾದ ಆಧಾರ ಗ್ರಂಥವಾಗುತ್ತದೆ'' ಎಂಬುದಾಗಿ ತನ್ನ ಗ್ರಂಥವನ್ನು ಕಟುವಾಗಿ ಟೀಕಿಸಿದ್ದವರಿಗೆ ಉತ್ತರವಿತ್ತಿದ್ದನು. ಈ ಹೇಳಿಕೆಯನ್ನು ೨೩ ವರ್ಷದ ತರುಣ ನೊಬ್ಬ ನೀಡಬೇಕಾದರೆ ಅವನಿಗೆ ಎಂತಹ ಎದೆಗಾರಿಕೆ ಇತ್ತು ?

ಲಿನೆಯಸ್‌ನ ಸಂಶೋಧನಾ ಗ್ರಂಥ ಪ್ರಕಟವಾಗಿ, ಅವನ ಪ್ರತಿಭೆ ಬೆಳಕಿಗೆ ಬಂತು. ಅದನ್ನರಿತ ಉಪ್ಪಸಾಲ ವಿಶ್ವವಿದ್ಯಾ ನಿಲಯದವರು ಅವನನ್ನು ಸಸ್ಯಶಾಸ್ತ್ರದ ಅಧ್ಯಾಪಕನನ್ನಾಗಿ ನೇಮಕ ಮಾಡಿದರು. ಕೆಲಕಾಲದಲ್ಲೇ ಸಸ್ಯಶಾಸ್ತ್ರದ ಪ್ರಾಧ್ಯಾ ಪಕರಿಗೆ ಸಹಾಯಕನಾಗಿಯೂ ಮರು ವರ್ಷದಲ್ಲೇ 'ಡೋ ಸೆಂಟ್' (Docent) ಆಗಿಯೂ ಬಡ್ತಿ ದೊರೆಯಿತು.

## ಐತಿಹಾಸಿಕ ಪ್ರವಾಸ

ಆ ಕಾಲದಲ್ಲಿ ಸ್ವೀಡನ್ ನೈಸರ್ಗಿಕ ಸಂಪತ್ತಿನಲ್ಲಿ ಬಹಳ ಹಿಂದುಳಿದಿತ್ತು. ಅದಕ್ಕೆ ಕಾರಣವೆಂದರೆ ಅನೇಕ ಸ್ವೀಡನ್ ಭಾಗಗಳ ಪ್ರಕೃತಿ ಸಂಪತ್ತಿನ ಅನ್ವೇಷಣೆಯಾಗಿರಲಿಲ್ಲ. ಉತ್ತರ ಸ್ವೀಡನ್ ಭಾಗದಲ್ಲಿ ಪ್ರಕೃತಿದತ್ತವಾಗಿ ಏನು ದೊರೆಯುತ್ತದೆ ಎಂಬುದು ಯಾರಿಗೂ ತಿಳಿದಿರಲಿಲ್ಲ. ೧೬೯೫ರಲ್ಲಿ ಲಿನೆಯಸ್‌ನ ಗುರು ರುಡ್‌ಬೆಕ್, ಲ್ಯಾಪ್‌ಲ್ಯಾಂಡ್ (Lappland) ಗೆ ಸಂಶೋಧನಾ ಪ್ರವಾಸ ಮಾಡಿದ್ದನು. ರುಡ್‌ಬೆಕ್ ತನ್ನ ಪ್ರವಾಸ ವರದಿಯನ್ನು ಸರಕಾರಕ್ಕೆ ಸಲ್ಲಿಸುವ ಮುನ್ನ ೧೭೦೨ ರಲ್ಲಿ ಉಪ್ಪಸಾಲ ನಗರಕ್ಕೆ ಬೆಂಕಿ ಬಿದ್ದು, ಮನೆ-ಮಠ ಎಲ್ಲವೂ ಭಸ್ಮವಾದುವು.

ಲಿನೆಯಸ್ ಅಧ್ಯಾಪಕನಾದ ಎರಡು ವರ್ಷದ ನಂತರ ೧೭೩೨ರಲ್ಲಿ ಸ್ವೀಡನ್ನಿನಲ್ಲೇ ಹಳೆಯ ವಿಜ್ಞಾನ ಸಂಘವಾಗಿದ್ದ ರಾಯಲ್ ಸೊಸೈಟಿ ಆಫ್ ಸೈನ್ಸ್ (Royal Society of Science) ಪರವಾಗಿ ಸಹಾಯ ಧನ ಪಡೆದು ಲ್ಯಾಪ್ ಲ್ಯಾಂಡನ್ನು ಅನ್ವೇಷಣೆ ಮಾಡಬೇಕಾಗಿ ಆತನನ್ನು ಕೋರ ಲಾಯಿತು. 'ವಿಜ್ಞಾನ ಸಂಘ' ದ ಕರೆಗೆ ಮನ್ನಣೆಯಿತ್ತು. ೧೭೩೬ರ ವಸಂತ ಋತುವಿನ ಮೇ ೧೨ರಂದು, ತನ್ನ ೨೫ನೇ ವರ್ಷದ ಜಯಂತ್ಯುತ್ಸವದ ಹಿಂದಿನ ದಿನ, ಏಕಾಂಗಿಯಾಗಿ, ಅಶ್ವಾರೂಢನಾಗಿ ಉಪ್ಪಸಾಲದ ಉತ್ತರಕ್ಕೆ ಪ್ರವಾಸವನ್ನಾ ರಂಭಿಸಿದನು.

ವಿಜ್ಞಾನರಂಗದ ಇತಿಹಾಸದಲ್ಲಿ ಇದೇ ವಿಶಾಲವಾದ ಪ್ರಕೃತಿ ಅನ್ವೇಷಣೆಯನ್ನು ಕುರಿತ ಮೊಟ್ಟ ಮೊದಲ ಪ್ರವಾಸ ವಾಗಿತ್ತು. ಆತ ಒಬ್ಬಂಟಿಗನಾಗಿಯೇ ಬರಿಯ ೨೫ ಪೌಂಡು ವೆಚ್ಚದಲ್ಲಿ, ೪೬೦೦ ಮೈಲಿಗಳಿಗೂ ಮಿಗಿಲಾಗಿ ಪ್ರವಾಸ ಮಾಡಿದನು. ಆತನ ಅನ್ವೇಷಣಾ ಪ್ರದೇಶಗಳಲ್ಲಿ ಉತ್ತರ ಸ್ವೀಡನ್ ಹಾಗೂ ನಾರ್ವೆ ದೇಶದ ಕೆಲವು ಭಾಗಗಳೂ ಸೇರಿ ಕೊಂಡಿದ್ದುವು. ಆತನ ಪ್ರವಾಸ ಐದು ತಿಂಗಳ ಕಾಲ ಹಿಡಿ ಯಿತು. ಲಿನೆಯಸ್ ತನ್ನೊಡನಿದ್ದ ಅತ್ಯಲ್ಪ, ನಿಕೃಷ್ಟವಾದ ಸಾಧನೆ ಸಲಕರಣೆ (ಉಪಕರಣಗಳು) ಗಳನ್ನು ಕುರಿತು ಹೀಗೆ ಬರೆದಿದ್ದಾನೆ–"ನನ್ನ ಅಂಗಿ ಹಗುರವಾದ ಲಿನ್ಸಿ ಉಣ್ಣೆಯದು. ಜೊತೆಗೆ ಒಂದು ಚಕ್ಕಳದ ಚಲ್ಲಣ ಮತ್ತು ಗುಂಡಾದ ಕುಲಾಯಿ, ಕಾಲಿಗೆ ಒಂದು ಜೊತೆ ಮೆಟ್ಟು. ನಾನು ಹೆಗಲಿಗೆ ನೇತು ಹಾಕಿಕೊಂಡಿದ್ದ ಚೀಲದೊಳಗೆ–ಒಂದು ಜೊತೆ ಕಾಲು ಚೀಲ, ಒಂದು ಇಂಕ್‌ಸ್ಟ್ಯಾಂಡ್, ಒಂದು ಸೂಕ್ಷ್ಮದರ್ಶಕ

ಹಾಗೂ ದೂರದರ್ಶಕ. ಒಂದು ಬಾಚಣಿಗೆ, ನನ್ನ ಟಿಪ್ಪಣಿ ಪತ್ರಗಳು, ಗಿಡಗಳನ್ನು ಒಣಗಿಸಿ ಕಟ್ಟಲು ಒಂದು ಕಟ್ಟು ಕಾಗದ. ಹೆಗಲ ಮತ್ತೊಂದು ಬದಿಗೆ ಅಷ್ಟಕೋಣದ ಮಾಪಕ ಹಾಗೂ ಒಂದು ಹ್ಯಾಂಗರ್ ಇದ್ದುವು''

ಇವೆಲ್ಲಕ್ಕಿಂತಲೂ ಮಿಗಿಲಾಗಿ ಲಿನೆಯಸ್‌ನಲ್ಲಿ ವಸಂತ ಋತುವಿನಷ್ಟೇ ಪ್ರಫುಲ್ಲತೆಯಿಂದ ಕೂಡಿದ ತೆರೆದ ವಿಶಾಲ ಮನಸ್ಸಿತ್ತು. ಆದುದರಿಂದಲೇ ಆತ ಅಂತಹ ದೀರ್ಘವೂ ಕಠಿಣತರವೂ ಆದ ಪ್ರವಾಸವನ್ನು ಪೂರ್ಣ ಮಾಡಲು ಸಾಧ್ಯವಾಯಿತು.

ಈಗಿನ ಕಾಲದಂತೆ ಅಂದು ಅತ್ಯಾಧುನಿಕವಾದ ಉಪಕರಣಗಳಿರಲಿಲ್ಲ ಇದ್ದಷ್ಟೇ ಸಲಕರಣೆಗಳನ್ನು ಉಪಯೋಗಿಸಿಕೊಂಡು ಲಿನೆಯಸ್ ತಾನು ಕಂಡು ಅಧ್ಯಯನ ಮಾಡಿದ ಪ್ರಾಣಿ ಮತ್ತು ಸಸ್ಯಗಳ ಪ್ರಕೃತಿ ಚಿತ್ರವನ್ನು ವರದಿ ಮಾಡಿದನು.

ಆತ ತನ್ನಲ್ಲಿದ್ದ ಡೈರಿಯನ್ನು ಕೊನೆಗೆ ಟಿಪ್ಪಣಿಯ ಪುಸ್ತಕವನ್ನಾಗಿ ಮಾಡಿಕೊಂಡು ತಾನು ತಂಗಿದ್ದ ಸ್ಥಳಗಳಲ್ಲೆಲ್ಲಾ ದಿನಚರಿಯ ಜೊತೆಗೆ ಅಂದು ಕಂಡ ದೃಶ್ಯಗಳ ಚಿತ್ರದ ವಿವರವನ್ನೆಲ್ಲಾ ಬರೆದಿಟ್ಟನು. ಆತ ಅಂದು ಬರೆದ ಟಿಪ್ಪಣಿ ಸಾಹಿತ್ಯ ದ್ಯೋತಕವಾಗಿದ್ದು ಸ್ವೀಡನ್ ದೇಶಕ್ಕೆ ಒಂದು ಅಪೂರ್ವ ನಿಧಿಯಾಗಿ ಉಳಿದುಕೊಂಡಿದೆ. ಆತನ ಡೈರಿಯಲ್ಲಿ ಲಿನೆಯಸ್‌ನ ಕಾವ್ಯಮಯವಾದ ನಿರರ್ಗಳ ಶೈಲಿ, ಶೀಘ್ರ ಗ್ರಹಣ ಶಕ್ತಿ, ಮತ್ತು ವೈಜ್ಞಾನಿಕ ವಿವರಣೆಯ ಅಸಾಧಾರಣ ಶಕ್ತಿಯನ್ನು ನಾವು ಕಾಣಬಹುದು.

ಕರಾವಳಿ ಹಾದಿಯಿಂದ ಲಿನೆಯಸ್ ಯುಮಿಯಾ (Umea) ನಗರಕ್ಕೆ ಬಂದನು. ಆಗ ಆಗಲೇ ಬೇಸಿಗೆಯಾರಂಭ

ವಾಗಿದ್ದುದರಿಂದ ಮಂಜುಗೆಡ್ಡೆಗಳು ಕರಗಿ ನೀರಾಗಿ ಹರಿಯಲಾರಂಭಿಸಿದ್ದುವು. ಆತ ದಕ್ಷಿಣ ಪರ್ವತ ಶ್ರೇಣಿಗಳನ್ನೇರಬೇಕೆಂಬ ಬಯಕೆ ಈಡೇರದಂತಾಯಿತು. ಆದರೂ ಹಿಂಜರಿಯದೆ ಲ್ಯಾಪ್ ಜನರಂತೆ ತಾನೂ ದೋಣಿಗಳನ್ನೇರಿ, ಕಾಲ್ನಡಗೆಯಲ್ಲೂ ಪ್ರಯಾಸಪಟ್ಟು ಲುಲಿಯಾ (Lulea) ನಗರ ತಲುಪಿದನು. ಕೊನೆಗೂ ಲೂಲೆ (Lule) ನದಿಯನ್ನು ದಾಟಿ ಉತ್ತರಗಡಿಯ ಕ್ವಿಕ್‌ಜೊಕ್ (Kuikkjokk) ಗೆ ಬಂದು ತಲುಪಿದನು. ಇಲ್ಲಿಂದ ಲಿನೆಯಸ್ ಸ್ವೀಡಿಷ್ ಭಾಷೆಯರಿತ ಲ್ಯಾಪ್ ಜನರ ಮಾರ್ಗದರ್ಶನ ಪಡೆದು ಸ್ವೀಡನ್ ಮತ್ತು ನಾರ್ವೆ ದೇಶಗಳನ್ನು ಬೇರ್ಪಡಿಸಿದ್ದ ಹಿಮರಾಶಿಗಳನ್ನು ದಾಟಿ ಹೊಸ ಜಗತ್ತಿಗೆ ಬಂದಂತಾಯಿತು. ಪಶ್ಚಿಮ ಅಟ್ಲಾಂಟಿಕ್ ಸಾಗರದ ಕೊನೆಯ ಕೆಲವು ಪ್ರದೇಶಗಳಿಗೂ ಭೇಟಿಯಿತ್ತು, ಲೋಫೊಟೆನ್ಸ್ (Lofotens) ನ ಮೂಲಕ ಕರಾವಳಿ ಹಾದಿ ಹಿಡಿದು ಮತ್ತೆ ಲುಯಿಯಾಕ್ಕೆ ಬಂದನು. ಪುನಃ ಅಲ್ಲಿಂದ ಉತ್ತರಕ್ಕೆ ಸಾಗಿ ಗಲ್ಫ್ ಆಫ್ ಬೋತ್ನಿಯಾ (Gulf of Bothnia) ಸುತ್ತುಹಾಕಿ, ಫಿನ್‌ಲ್ಯಾಂಡ್ ಮಾರ್ಗವಾಗಿ ಆಬೋ (Abo) ಗೆ ಬಂದನು. ಆಬೋ ನಗರವು ಸ್ವೀಡನ್ ಸಾಮ್ರಾಜ್ಯದ ಮೂರನೇ ವಿಶ್ವವಿದ್ಯಾನಿಲಯದ ನಗರವಾಗಿತ್ತು. ಅಲ್ಲಿಂದ ಅಲ್ಯಾಂಡ್ (Alond) ದ್ವೀಪಸ್ತೋಮಗಳನ್ನೂ ನೋಡಿಕೊಂಡು ಉಪ್ಪಸಾಲದತ್ತ ಪ್ರಯಾಣ ಮಾಡಿದನು.

ಆರು ತಿಂಗಳ ನಂತರ, ೧೭೩೨ರ, ಅಕ್ಟೋಬರ್ ೧೦ನೇ ತಾರೀಖಿನಂದು, ಬಹು ಬಳಲಿ ಆಯಾಸಗೊಂಡು, ಉಪ್ಪಸಾಲ ವೈಜ್ಞಾನಿಕ ಸಂಘದ ಕೊಠಡಿಗೆ, ಮಧ್ಯ ರಾತ್ರಿಯಲ್ಲಿ

ಬಂದು ತಲುಪಿದನು. ಲಿನೆಯಸ್ ತನ್ನ ಪ್ರವಾಸದಲ್ಲಿ ಅನುಭವಿಸಿದ ಕಷ್ಟ ನಷ್ಟಗಳು ಅಸದಳವಾದುವು. ಶೀತವಲಯದ ಮಂಜುಗೆಡ್ಡೆಗಳನ್ನೇ ಆಹಾರವಾಗಿ ತಿಂದು, ಸಹಿಸಲಸದಳವಾದ ಚಳಿಯಲ್ಲಿ ನಡುಗಿ, ಪ್ರವಾಹ ಭರಿತವಾದ ನದಿಗಳನ್ನು ಒಂಟಿ ದೋಣಿಯಲ್ಲಿಯೇ ದಾಟಿ, ಸುಸ್ತು ಸಂಕಟಗಳಿಂದಲೇ ಕಡಿದಾದ ಒಂಟಿಗಳನ್ನು ಏರಿ, ಕ್ರೂರ ಪ್ರಾಣಿಗಳ ಬಾಯಿಂದ ತಪ್ಪಿಸಿಕೊಂಡು, ಹಿಮುಸೊಳ್ಳೆಗಳ ಕಡಿತದಿಂದ ನಿದ್ರೆಯಿಲ್ಲದೆ, ಹಸಿವು ತೃಷೆಗಳಿಂದ ಬಳಲುತ್ತಿದ್ದರೂ, ಎಲ್ಲಾದರೂ ಶೀತವಲಯದ ಸುಂದರವಾದ ಹೂಗಳು ಕಣ್ಣಿಗೆ ಬಿದ್ದರೆ ಸಾಕು, ಎಲ್ಲ ಕಷ್ಟಗಳನ್ನೂ ಮರೆತು ಪ್ರಫುಲ್ಲನಾಗಿ ಬಿಡುತ್ತಿದ್ದನು. ಲಿನೆಯಸ್ ನಿಜಕ್ಕೂ ಎಂತಹ ಪ್ರಕೃತಿ ಪ್ರೇಮಿ! ಎಷ್ಟೋ ಸಾರಿ ಆತನಲ್ಲಿದ್ದ ಚಾಕು ಆ ಹೂ ದಂಡೆಗಳನ್ನು ಕೊಯ್ಯಲು ಅಶಕ್ತವಾದಾಗ ತನ್ನ ದುರದೃಷ್ಟಕ್ಕಾಗಿ ವಿಷಾದ ಪಡುತ್ತಿದ್ದನು

ತನ್ನ ಪ್ರವಾಸ ಕಾಲದಲ್ಲಿ ಲಿನೆಯಸ್ ನೂರಾರು ಜಾತಿಯ ಹೊಸ ಸಸ್ಯಗಳನ್ನು ಕಂಡುಹಿಡಿದನಲ್ಲದೆ, ಅನೇಕ ವನ್ಯ ಮೃಗಗಳ, ಶೀತವಲಯದ ಪ್ರಾಣಿಗಳ ಚಲನ ವಲನಗಳನ್ನು ಗುರುತಿಸಿ ಅವುಗಳ ಜೀವನ ಚರಿತ್ರೆಯನ್ನು ಅಧ್ಯಯನ ಮಾಡಿದನು. ತನ್ನ ಪ್ರವಾಸ ಕಾಲದಲ್ಲಿ ಕಂಡು ತಿಳಿದು ಬರೆದ ಟಿಪ್ಪಣಿಗಳು, ವರದಿ ಪತ್ರಗಳು ಹಾಗೂ ಅನೇಕ ಕಡತಗಳನ್ನು ಶೀತದಿಂದ ಅವು ಹಾಳಾಗದಂತೆ, ಲ್ಯಾಪ್ ಜನರ ಮನೆಗಳಲ್ಲಿ ಬೆಂಕಿ ಕಾಯಿಸಿ ಅವನ್ನು ಜೋಪಾನವಾಗಿಟ್ಟಿದ್ದನು.

ಸಜೀವಿಗಳನ್ನು ವೈಜ್ಞಾನಿಕವಾಗಿ ಪ್ರಕೃತಿಯಲ್ಲಿ ದೀರ್ಘವಾಗಿ ಮತ್ತು ವಿಶದವಾಗಿ ನೇರ ಅಧ್ಯಯನ ಮಾಡಿದವರಲ್ಲಿ ಲಿನೆಯಸ್‌ನನ್ನು ಬಿಟ್ಟರೆ ಮತ್ತಾವ ವಿಜ್ಞಾನಿಯೂ ನಮಗೆ

ಕಾಣುವುದಿಲ್ಲ. ಜ್ಞಾನಾರ್ಜನೆಯುನ್ನು ಪ್ರಕೃತಿಯಿಂದ ನೇರ ವಾಗಿ ಪಡೆದವರಲ್ಲಿ ಲಿನೆಯುಸ್ ಅಗ್ರಗಣ್ಯನಾಗಿದ್ದಾನೆ.

ಲಿನೆಯುಸ್ ತನ್ನ ಪ್ರವಾಸ ಕಾಲದಲ್ಲಿ ಸಜೀವಿಗಳ ಜೀವನ ಚಿತ್ರವನ್ನಲ್ಲದೆ ಸ್ವೀಡನ್ ದೇಶದ ಅನೇಕ ಖನಿಜ ವಸ್ತುಗಳನ್ನು ಪತ್ತೆ ಹಚ್ಚಿ, ಅವು ಎಲ್ಲೆಲ್ಲಿ ಸಿಗುತ್ತವೆ ಎಂದು ಪಟ್ಟಿ ಮಾಡಿದನು. ಜೊತೆಗೆ ಅರಣ್ಯ ಸಂಪತ್ತನ್ನು ರೂಢಿಸಿ ದೇಶದ ಆರ್ಥಿಕ ಸ್ಥಿತಿ ಸುಧಾರಿಸುವುದು ಹೇಗೆ ಎಂಬುದನ್ನು ತೋರಿಸಿಕೊಟ್ಟನು. ತಾನು ಕಂಡ ಅನೇಕ ರೋಗ-ರುಜಿನಗಳನ್ನು ಪಟ್ಟಿ ಮಾಡಿದನು.

ಲಿನೆಯುಸ್ ತಾನು ಪ್ರವಾಸ ಕಾಲದಲ್ಲಿ ಬರೆದುಕೊಂಡಿದ್ದ ಟಿಪ್ಪಣಿಗಳು ಮತ್ತು ಶೇಖರಿಸಿದ್ದ ಸಜೀವಿಗಳ ಮಾದರಿಗಳ ಜೊತೆಗೆ ತನ್ನ ಅಪೂರ್ವ ಜ್ಞಾಪಕ ಶಕ್ತಿಯುನ್ನು ಉಪಯೋಗಿಸಿ ಕೊಂಡು ತಾನು ಕಂಡ ನೈಜ ಚಿತ್ರವನ್ನು ಕಾವ್ಯ ರೂಪದಲ್ಲಿ ಹೊರತರಲು ಮೂರು ವರ್ಷಗಳು ಬೇಕಾದುವು ಆ ವೇಳೆ ಗಾಗಲೇ ಲಿನೆಯುಸ್‌ನ ಹೆಸರು ಸ್ವೀಡನ್ನಿನಾದ್ಯಂತ ಪ್ರಸಿದ್ಧಿ ಯಾಗಿದ್ದು, ಸ್ವೀಡನ್ ಒಬ್ಬ ಮೇಧಾವಿ ಪ್ರಕೃತಿ ವಿಜ್ಞಾನಿ ಯುನ್ನು ಪಡೆದಿದೆ ಎಂಬುದು ಅಲ್ಲಿನ ಜನರಿಗಾಗಲೇ ತಿಳಿದು ಹೋಗಿತ್ತು.

ಲಿನೆಯುಸ್‌ನ ಲ್ಯಾಪ್‌ಲಾಂಡ್ ಪ್ರವಾಸಾನ್ವೇಷಣಾ ವರದಿಯು ೧೭೩೭ರಲ್ಲಿ "ಫ್ಲೋರಾ ಲಾಪ್ಪೋನಿಕಾ" (Flora-Lapponika) ಎಂಬ ಗ್ರಂಥ ರೂಪದಲ್ಲಿ ಹಾಲೆಂಡ್‌ನಲ್ಲಿ ಪ್ರಕಟವಾಯಿತು. ಇದರಲ್ಲಿ ಸಸ್ಯ ಮತ್ತು ಪ್ರಾಣಿಗಳ ಜೀವನ ಚರಿತ್ರೆಯು ಜೊತೆಗೆ ಲ್ಯಾಪ್ ಜನರ ನಡೆ-ನುಡಿ, ಅವರ ಜೀವನ ಕ್ರಮಗಳನ್ನು ಚಿತ್ರಿಸಿದ್ದಾನೆ. ಆದರೆ ಆತನ ಪ್ರವಾಸಕಥನವಾದ "ಇಂಟರ್ ಲಾಪ್ಪೋನಿಕಾ" (Inter Lapponika) ಬೆಳಕು

ಕಾಣಲು ೧೮ನೇ ಶತಮಾನದ ಪ್ರಾರಂಭವನ್ನು ನೋಡ ಬೇಕಾಯಿತು.

ಮುಂದಿನ ವರ್ಷಗಳಲ್ಲಿ ಲಿನೆಯಸ್ ಸಸ್ಯ ಶಾಸ್ತ್ರದ ವ್ಯಾಸಂಗದ ಜೊತೆಗೆ ಪ್ರಾಣಿಶಾಸ್ತ್ರ ಮತ್ತು ಭೂಗರ್ಭಶಾಸ್ತ್ರ ಗಳ ಜ್ಞಾನಾರ್ಜನೆಯನ್ನು ಮಾಡಿದನು. ಆತನಿಗೆ ಬಿಡುವು ದೊರೆತಾಗಲೆಲ್ಲಾ ಡಾಲರ್ನಾ (Dalarna) ದ ಖನಿಜದ ಗಣಿಗಳಿಗೆ ಭೇಟಿಯಿತ್ತು ಭೂಗರ್ಭಶಾಸ್ತ್ರ ಮತ್ತು ಖನಿಜಗಳ ಚರಿತ್ರೆಯನ್ನು ಅಧ್ಯಯನ ಮಾಡುತ್ತಿದ್ದನು. ಭೇಟಿಯಿತ್ತು ಬಂದನಂತರ ತನ್ನ ವಿದ್ಯಾರ್ಥಿಗಳಿಗೆ ಆ ಬಗ್ಗೆ ಉಪನ್ಯಾಸ ಮಾಡುತ್ತಿದ್ದನು. ಇದರಿಂದ ಅರಿತ ಜ್ಞಾನದ ಪೂರಕವಾಗಿ "ಡೈಯಾಟಾ ನ್ಯಾಚುರಾಲಿಸ್" (Dieta Naturalis) ಎಂಬ ಗ್ರಂಥವನ್ನು ಬರೆದನು. ಇದರಲ್ಲಿ ಲಿನೆಯಸ್ ಮಾನವ ಪ್ರಕೃತಿಯ ಸಿರಿ ಸಂಪತ್ತನ್ನು ಭೋಗಿಸಿ ನೈಸರ್ಗಿಕವಾಗಿ ಹೇಗೆ ಜೀವನ ನಡೆಸಬೇಕು ಎಂಬುದನ್ನು ಪ್ರಸ್ತಾಪಿಸಿದ್ದಾನೆ. ಈ ಗ್ರಂಥ ಸ್ವೀಡನ್‌ನಲ್ಲಿ ಇಷ್ಟರಲ್ಲೇ ಪ್ರಕಟವಾಗಲಿದೆ.

ಆತನ ಪ್ರಕೃತಿ ಅನ್ವೇಷಣಾ ಅಧ್ಯಯನಕ್ಕೆ ಮತ್ತೊಂದು ಸದವಕಾಶ ದೊರೆಯಿತು. ಅದೆಂದರೆ ಸ್ವೀಡನ್ನಿನ ಅಪ್ಪರ್ ಡಾಲರ್ನಾ (Upper Dalarna) ಸರ್ವೆ ಕಾರ್ಯ ಮಾಡಲು ಲಿನೆಯಸ್‌ನನ್ನೇ ನೇಮಕ ಮಾಡಲಾಯಿತು. ಆದರೆ ಈ ಸಾರಿ ಆತನಿಗೆ ಸಾಕಷ್ಟು ಸಿಬ್ಬಂದಿ ಸಲಕರಣೆಗಳ ಜೊತೆಗೆ ಆ ಪ್ರಾಂತ್ಯದ ಗೌರ್ನರ್ ಖರ್ಚಿಗೆ ಸಾಕಷ್ಟು ಹಣವನ್ನು ಕೊಟ್ಟಿದ್ದರು.

ಲಿನೆಯಸ್ ಪ್ರವಾಸ ಕೈಗೊಂಡು ೧೭೩೪ರ ಹೊಸ ವರ್ಷ ಆರಂಭವಾಗುತ್ತಿದ್ದಂತೆಯೇ ಡಾಲರ್ನಾ ಪ್ರಾಂತ್ಯದ ಸರ್ವೆ ಕಾರ್ಯ

ಮುಗಿಸಿದ್ದನು. ಆತನ ಪ್ರವಾಸ ಕಾಲದಲ್ಲಿ ಡಾಲರ್ನಾ ಪ್ರಾಂತ್ಯದ ಒಂದು ಗ್ರಾಮಾಂತರ ಪಟ್ಟಣವಾದ ಫಾಲನ್ (Falun)ಗೂ ಭೇಟಿಯಿತ್ತಿದ್ದನು. ಆತನಿಗೆ ಅನೇಕ ಜನರ ಪರಿಚಯವಾಯಿತು. ತಾಮ್ರದ ಗಣಿ ಕೆಲಸಗಾರರಾದಿಯಾಗಿ ಆ ನಗರದ ಗೌರ್ನರ್‌ರವರೆಗೂ ಅವನ ಮಿತ್ರರಾದರು. ಆತ ೧೭೩೪ರ ಕ್ರಿಸ್‌ಮಸ್‌ನ್ನೂ ಆ ನಗರದಲ್ಲೇ ಕಳೆದನು.

## ವಿವಾಹಕ್ಕಾಗಿ ವೈದ್ಯವೃತ್ತಿ

ಅಲ್ಲಿನ ಜನಪ್ರಿಯ ವೈದ್ಯನಾಗಿದ್ದ ಡಾ|| ಮೋರಿಯಸ್ (Moreus) ನಿಗೂ ಲಿನೆಯಸ್‌ನಿಗೂ ಸ್ನೇಹ ಬೆಳೆಯಿತು. ಡಾ|| ಮೋರಿಯಸ್ ಆತನನ್ನು ತನ್ನ ಅತಿಥಿಯಾಗಿರಲು ಮನೆಗೆ ಆಹ್ವಾನಿಸಿದನು. ಲಿನೆಯಸ್ ಡಾ|| ಮೋರಿಯಸ್‌ನ ಆಮಂತ್ರಣವನ್ನು ಸ್ವೀಕರಿಸಿ ಆತನ ಮನೆಯಲ್ಲಿ ಅತಿಥಿಯಾಗಿ ತುಂಬಾ ಸಲಿಗೆಯಿಂದ ಅನ್ಯೋನ್ಯವಾಗಿದ್ದುಬಿಟ್ಟನು. ಲಿನೆಯಸ್ ಆತನ ಮನೆಯಲ್ಲಿ ಅತಿಥಿಯಾಗಿದ್ದಾಗ ಒಂದು ಮಹತ್ತರ ಘಟನೆ ನಡೆಯಿತು. ಡಾ|| ಮೋರಿಯಸ್ಸನ ಪುತ್ರಿ ಸಾರಾ ಲೀಸಾ (Sara Lisa) (Sara Morea) ಳೊಡನೆ ಸರಸ-ಸಲ್ಲಾಪದಲ್ಲಿ ಕಳೆದು, ಆಕೆಯೊಡನೆ ನರ್ತನಮಾಡಿ, ನಲಿದು ಆಡ್ಡಾಡಿ ಅನುರಕ್ತನಾದನು. ಲಿನೆಯಸ್ ಸಾರಾ ಲೀಸಾಳ ಮೋಹಜಾಲದಿಂದ ಪಾರಾಗಲು ಸಾಧ್ಯವಾಗಲಿಲ್ಲ. ಕೊನೆಗೆ ಆಕೆಯನ್ನೇ ವಿವಾಹವಾಗಬೇಕೆಂದು ದೃಢಸಂಕಲ್ಪಮಾಡಿದನು. ಆದರೆ ಈ ಬಡ ಲಿನೆಯಸ್‌ನಿಗೂ ಆ ಜನಪ್ರಿಯ ಶ್ರೀಮಂತ ವೈದ್ಯನ ಪುತ್ರಿಗೂ ಬಹಳ ಅಂತರವಿತ್ತು. ಆದರೂ ಲಿನೆಯಸ್ ಧೃತಿಗೆಡದೆ ಆಕೆಯನ್ನು ವಿವಾಹವಾಗುವ ಇಚ್ಛೆಯನ್ನು ಡಾ||

ಮೋರಿಯಸ್‌ನಿಗೆ ತಿಳಿಸಿದನು. ಲಿನೆಯಸ್‌ನ ಈ ಎಲ್ಲಾ ಪ್ರೇಮಪ್ರಕರಣಗಳೂ ಆತ ಬರೆದಿಟ್ಟಿರುವ ಡೈರಿಯಿಂದಾಗಿ ನಮಗಿಂದು ತಿಳಿದುಬಂದಿವೆ.

ಈ ದೃಷ್ಟಿಯಿಂದ ಆತನ ಡೈರಿ ನಮಗೊಂದು ಅಪೂರ್ವ ನಿಧಿಯಾಗಿದೆ. ಆ ಡೈರಿಯಲ್ಲೇ ಲಿನೆಯಸ್ ತನ್ನ ಪ್ರೇಯಸಿಯಾದ ಸಾರಾ ಲೀಸಾಳನ್ನು ಒಮ್ಮೆ 'ಲ್ಯಾಪ್ ಉಡುಗೆ ತೊಡಿಗೆ' ಯಲ್ಲಿ ನೋಡಲು ಬಯಸಿದ್ದುದರ ಉಲ್ಲೇಖವೂ ಇದೆ.

ಕೊನೆಗೆ ಡಾ|| ಮೋರಿಯಸ್ ತನ್ನ ಮಗಳನ್ನು ಲಿನೆಯಸ್‌ನಿಗೆ ವಿವಾಹ ಮಾಡಿಕೊಡಲು ಒಪ್ಪಿಕೊಂಡನಾದರೂ ಲಿನೆಯಸ್ ವಿವಾಹಕ್ಕೆ ಮೊದಲು ಕೆಲವು ಷರತ್ತುಗಳನ್ನು ಪೂರೈಸಬೇಕಾಯಿತು. ಇದರ ಫಲವಾಗಿ ಲಿನೆಯಸ್ ತನ್ನ ಮತ್ತು ತನ್ನ ಹೆಂಡತಿಯ ಸುಖಜೀವನೋಪಾಯಕ್ಕಾಗಿ ವೈದ್ಯಕೀಯ ವಿದ್ಯೆ ಕಲಿತು ವೈದ್ಯ ವೃತ್ತಿಯನ್ನು ಹಿಡಿಯಬೇಕೆಂದು ಆಜ್ಞಾಪಿಸಿದನು. ಲಿನೆಯಸ್ ವೈದ್ಯಕೀಯ ಪದವಿ ಪಡೆದು ವೈದ್ಯನಾದ ನಂತರವೇ ವಿವಾಹವೆಂದು ಡಾ|| ಮೋರಿಯಸ್ ಆತನಿಗೆ ತಿಳಿಸಿದನು.

ಆ ಕಾಲದಲ್ಲಿ ಸ್ವೀಡನ್ ವಿದ್ಯಾರ್ಥಿಗಳು ಉನ್ನತ ಮಟ್ಟದ ಹಾಲೆಂಡ್ ವಿಶ್ವವಿದ್ಯಾನಿಲಯಕ್ಕೆ ಸೇರಿ ವೈದ್ಯಕೀಯ ವಿದ್ಯೆಯಲ್ಲಿ ಪದವಿ ಪಡೆದು ಬರುತ್ತಿದ್ದರು. ಆ ಉದ್ದೇಶಕ್ಕಾಗಿ ಲಿನೆಯಸ್ ವೈದ್ಯನಾಗದೆ ಸಾರಾ ಲೀಸಾಳ ಕೈ ಹಿಡಿಯಲು ಬೇರೆ ಮಾರ್ಗವಿಲ್ಲವಾದ್ದರಿಂದ, ೧೭೩೫ರಲ್ಲಿ ಹಾಲೆಂಡಿನತ್ತ ಪಯಣ ಮಾಡಿದನು. ಡಾ|| ಮೋರಿಯಸ್ ಲಿನೆಯಸ್ ವೈದ್ಯನಾಗಿ ಬರುವವರೆವಿಗೂ ತನ್ನ ಮಗಳಿಗೆ ವಿವಾಹಮಾಡುವುದಿಲ್ಲವೆಂದು ಆತನಿಗೆ ವಾಗ್ದಾನವಿತ್ತಿದ್ದನು. ಅಲ್ಲದೆ ಲಿನೆಯಸ್ ಮರಳಿ

ಬರುವವರೆಗೂ ಸಾರ ಲೀಸಾಳ ಜೀವನಕ್ಕಾಗಿ ವರದಕ್ಷಿಣೆಯ ರೂಪದಲ್ಲಿ ಒಂದಿಷ್ಟು ಹಣವನ್ನಿಟ್ಟು, ಅದರಿಂದ ಬರುವ ಬಡ್ಡಿಯನ್ನೆಲ್ಲಾ ಆಕೆಯ ಖರ್ಚಿಗೆ ಕೊಡುವ ಏರ್ಪಾಡನ್ನೂ ಡಾ|| ವೋರಿಯಸ್ ವ್ಯವಸ್ಥೆ ಮಾಡಿದನು.

ಲಿನೆಯಸ್ ಹಾಲೆಂಡಿಗೆ ಹೋಗುವ ಮಾರ್ಗವಾಗಿ ಸ್ಟೆನ್‌ಬ್ರೋಹಲ್ಟ್ (Stenbrohult) ಗೆ ಭೇಟಿಯಿತ್ತು ತನ್ನ ತಂದೆಯನ್ನು ನೋಡಿಕೊಂಡು, ಸಮುದ್ರಯಾನ ಮಾಡಿ ಜರ್ಮನಿಗೆ ಬಂದನು. ಅನಂತರ ಹ್ಯಾಂಬರ್ಗ್‌ಗೆ ಬಂದು ಅಲ್ಲಿ ಒಳ್ಳೆಯ ವಿದ್ವಾಂಸರ ಸ್ನೇಹ ಬೆಳೆಸಿಕೊಂಡನು. ಲಿನೆಯಸ್ ಅಲ್ಲಿಗೆ ಬರುವ ಮುಂಚೆಯೇ ಅಲ್ಲಿನ ಪತ್ರಿಕೆಯಾದ "Ham, burgische Nachrischten von glelehrten Sachen" ಎಂಬುದು ಆತನ ಅನ್ವೇಷಣಾ ಪ್ರವಾಸಗಳು. ಪ್ರಕಟವಾಗಿದ್ದ ಕೃತಿಗಳನ್ನೊಳಗೊಂಡ ಲಿನೆಯಸ್‌ನ ಸಂಕ್ಷಿಪ್ತ ಪರಿಚಯವನ್ನು ಪ್ರಕಟಿಸಿತ್ತು. ಈ ಪ್ರಕಟನೆಯನ್ನು ಲಿನೆಯಸ್ ನೊಡನೆ ವಿಶೇಷ ಸಂದರ್ಶನ ಪಡೆದು ಆ ಪತ್ರಿಕೆಯವರು ಪ್ರಕಟಿಸಿದ್ದರು. ಇಂಗ್ಲೀಷರ 'ಪ್ರಚಾರ ತಂತ್ರ' ವನ್ನು ಅರಿತಿದ್ದ ಲಿನೆಯಸ್ ಈ ರೀತಿ ಮಾಡಿರಬಹುದೆಂದು ಕೆಲವರು ಅಭಿಪ್ರಾಯ ಪಡುತ್ತಾರೆ.

೧೭೩೫ರ ಜೂನ್ ತಿಂಗಳಿನಲ್ಲಿ ಲಿನೆಯಸ್ ಅಲ್ಲಿಂದ ಹಾಲೆಂಡಿಗೆ ತನ್ನ ಪ್ರಯಾಣವನ್ನು ಮುಂದುವರಿಸಿದನು. ಹಾಲೆಂಡಿನ ಆಂಸ್ಟರ್ ಡ್ಯಾಂ (Amstardam) ನಿಂದ ಹೊರಟು ಹಾರ್ಡರ್‌ವಿಜಿಕ್ (Harderwijik) ನಗರ ತಲುಪಿ, ವೈದ್ಯವಿದ್ಯೆ ಕಲಿಯಲೋಸುಗ ಅಲ್ಲಿನ ವಿಶ್ವವಿದ್ಯಾ ನಿಲಯಕ್ಕೆ ವಿದ್ಯಾರ್ಥಿಯಾಗಿ ಸೇರಿಕೊಂಡನು. ಆಗಿನ ಕಾಲದಲ್ಲಿ

ಸ್ವೀಡನ್ನಿನಿಂದ ವೈದ್ಯ ವಿದ್ಯೆ ಕಲಿಯಲು ಆ ವಿಶ್ವವಿದ್ಯಾನಿಲಯಕ್ಕೆ ಬಹಳ ವಿದ್ಯಾರ್ಥಿಗಳು ಬರುತ್ತಿದ್ದರು. ಆ ವಿಶ್ವವಿದ್ಯಾನಿಲಯಕ್ಕೆ ಹೆಚ್ಚು ವಿದ್ಯಾರ್ಥಿಗಳು ಬರುತ್ತಿದ್ದುದಕ್ಕೆ, ಬೇರೆ ವಿಶ್ವವಿದ್ಯಾನಿಲಯಗಳಿಗಿಂತ ಅಲ್ಲಿ ಶುಲ್ಕ ಕಡಮೆಯಾಗಿದ್ದುದೂ ಒಂದು ಆಕರ್ಷಣೆಯಾಗಿತ್ತೆನ್ನಬಹುದು. ಕಾಲಕ್ರಮೇಣ ಆ ವಿಶ್ವವಿದ್ಯಾನಿಲಯ ಮುಚ್ಚಲ್ಪಟ್ಟಿತು. ಲಿನೆಯಸ್ ಹಾರ್ಡರ್‌ವಿಜಿಕ್ ವಿಶ್ವವಿದ್ಯಾನಿಲಯಕ್ಕೆ ಸೇರುವಾಗ ಸ್ವೀಡನ್‌ನಲ್ಲಿ ಚಳಿಜ್ವರ (Ague) ವನ್ನು ಕುರಿತು ಬರೆದಿದ್ದ ಸಂಶೋಧನಾತ್ಮಕ ಗ್ರಂಥವನ್ನು ಕೊಂಡೊಯ್ದಿದ್ದನು. ಆ ಸಮಯದಲ್ಲೇ ಅದನ್ನು ಅಲ್ಲಿಯೇ ಪ್ರಕಟಿಸಿ, ವೈದ್ಯಕೀಯ ಪರೀಕ್ಷೆಯನ್ನೂ ಮುಗಿಸಿ, ಆ ವಿಶ್ವವಿದ್ಯಾನಿಲಯದಿಂದ ಎಂ ಡಿ. ಪದವಿಯನ್ನೂ ಪಡೆದನು. ತನ್ನ ಗುರಿ ಶೀಘ್ರವಾಗಿ ಮುಟ್ಟಬೇಕೆಂಬ ಮನಸ್ಸಿದ್ದರೆ ಲಿನೆಯಸ್ ಆ ಕೂಡಲೇ ಸ್ವೀಡನ್ನಿಗೆ ಮರಳಬಹುದಾಗಿತ್ತು. ಆದರೆ ಅಂದು ಜಗದ್ವಿಖ್ಯಾತವಾಗಿದ್ದ ಲೈಡನ್ (Leiden) ನನ್ನು ಸಂದರ್ಶಿಸಿ, ಅದರಲ್ಲೂ ಆ ಕಾಲದಲ್ಲಿ "ಅಖಂಡ ಯುರೋಪ್‌ನ ಮಹಾನುಭಾವ ವೈದ್ಯ" (All Europe's Oracle of Medicine) ನೆಂದು ಹೆಸರು ಪಡೆದಿದ್ದ ಬೋಅರ್ ಹ್ಯಾವೆ (Boer Haave) ಯನ್ನು ಕಂಡು ಮಾತಾಡುವ ಘನ ಉದ್ದೇಶದಿಂದ ತಾಯ್ನಾಡ ಪಯಣವನ್ನು ಕೆಲಕಾಲ ಮುಂದೂಡಿದನು.

ಲಿನೆಯಸ್ ತಾನು ಹಾಲೆಂಡಿಗೆ ಹೋಗುವಾಗ ತನ್ನೊಡನೆ ಉಪ್ಪಸಾಲದಲ್ಲಿ ಬರೆದಿದ್ದ ಕೆಲವು ಹಸ್ತಪ್ರತಿಗಳನ್ನೂ ತೆಗೆದುಕೊಂಡು ಹೋಗಿದ್ದನು. ಹಾಲೆಂಡ್‌ನಲ್ಲಿ ಜೀವವಿಜ್ಞಾನಿ ಹಾಗೂ ಖ್ಯಾತ ವೈದ್ಯನಾಗಿದ್ದ ಡಾ|| ಜಾನ್ ಫ್ರೆಡ್ರಿಕ್

ಗ್ರೋನೋವಿಯುಸ್ (John Fredrick Gronovious) ನನ್ನು ಭೇಟಿಮಾಡಿ ಆತನಿಗೆ ತಾನು ಬರೆದಿದ್ದ "ಸಿಸ್ಟೆಮಾ ನ್ಯಾಚುರೇ" (Systema Naturae) ಗ್ರಂಥದ ಹಸ್ತಪ್ರತಿಯನ್ನು ತೋರಿಸಿದನು. ಗ್ರೋನೋವಿಯಸ್ ಲಿನೆಯುಸ್ಸಿನ ಪ್ರತಿಭಾ ಪೂರ್ಣವಾದ ಸಂಶೋಧನಾ ವರದಿಯನ್ನು ಓದಿ ಮೆಚ್ಚಿಕೊಂಡನಲ್ಲದೆ ಆತನ ಮಿತ್ರ ಸ್ಕಾಟಿಸ್, ವೈದ್ಯ ಡಾ|| ಐಸಾಕ್ ಲಾಸನ್ (Issac Lawson) ಇಬ್ಬರೂ ಜೊತೆಯಾಗಿ ಆ ಪುಸ್ತಕವನ್ನು ಅವರ ಖರ್ಚಿನಲ್ಲಿಯೇ ಅಚ್ಚುಮಾಡಿ ಪ್ರಕಟಿಸುವ ಅಭಿಲಾಷೆಯನ್ನು ವ್ಯಕ್ತಪಡಿಸಿದನು. ಲಿನೆಯುಸ್ ಆ ಕಾರ್ಯಕ್ಕೆ ಸಂತೋಷವಾಗಿ ಒಪ್ಪಿಕೊಂಡನು.

ಲಿನೆಯುಸ್‌ನ "ಸಿಸ್ಟೆಮಾ ನ್ಯಾಚುರೇ" ಗ್ರಂಥವನ್ನು ಇಂದು ಜೀವ ವಿಜ್ಞಾನಿಗಳು ವರ್ಗೀಕರಣ ಪದ್ಧತಿಗೆ ಬುನಾದಿಯಾಗಿದೆ ಎಂದು ಒಪ್ಪಿಕೊಂಡಿದ್ದಾರೆ. ಈ ಜಗತ್ ಪ್ರಸಿದ್ಧ ವರ್ಗೀಕರಣ ಕೃತಕವಾಗಿದ್ದಾದರೂ, ಲಿನೆಯುಸ್ ಪ್ರಕೃತಿಯ ಜೀವ ವಸ್ತುಗಳನ್ನೆಲ್ಲಾ ಮುಖ್ಯವಾಗಿ ಮೂರು ವರ್ಗಗಳಾಗಿ ವಿಂಗಡಿಸಿದ್ದಾನೆ. ಆತ ತನ್ನ ಹೆಸರಾಂತ ಲೈಂಗಿಕ ವರ್ಗೀಕರಣ ಪದ್ಧತಿಯನ್ನು ಅನುಸರಿಸಿ, ಪ್ರಥಮತಃ ವಿವಿಧ ಸಸ್ಯಗಳನ್ನು ಕ್ರಮವಾಗಿ ವಿಂಗಡಿಸಿ ವರ್ಗೀಕರಣ ಮಾಡಿದ್ದನು. ಈ ಗ್ರಂಥ ಪ್ರಕಟವಾಗಿ ಪ್ರಕೃತಿ ವಿಜ್ಞಾನದ ಇತಿಹಾಸದಲ್ಲಿ ಒಂದು ನವ ಶಕೆಯನ್ನು ಆರಂಭಗೊಳಿಸಿತು. ಈ ಗ್ರಂಥದಲ್ಲಿ ಕಂಡುಬಂದ ಲಿನೆಯುಸ್‌ನ ವೈಜ್ಞಾನಿಕವಾದ ವಿಶ್ಲೇಷಣೆ, ಸ್ಪಷ್ಟ ವಿವರಣೆ ಸಜೀವಿಗಳ ಜೀವನಕ್ರಮ, ಮೇಲಾಗಿ ಲಿನೆಯುಸ್ ಕಟ್ಟು ನಿಟ್ಟಾಗಿ ಅನುಸರಿಸಿದ್ದ ವರ್ಗೀಕರಣದ ಕ್ರಮಬದ್ಧ ನಿಯಮ ಗಳನ್ನು ಎಷ್ಟೋ ವಿಜ್ಞಾನಿಗಳು ಮೆಚ್ಚಿ ಕೊಂಡಾಡಿದರು.

ಆದರೂ ಕೆಲವರು ಈತನ ಗ್ರಂಥ ತಪ್ಪಯಾಗಿದೆಯೆಂದೂ, ವರ್ಗೀಕರಣದ ಕ್ರಮ ಅಸ್ವಾಭಾವಿಕವಾಗಿದೆ ಎಂದೂ ಕಟುವಾಗಿ ಟೀಕಿಸಿದರು.

ಇದರ ಫಲವಾಗಿ ಲಿನೆಯಸ್ ಅನೇಕ ವಿಜ್ಞಾನಿಗಳ ಹೊಗಳಿಕೆ-ತೆಗಳಿಕೆಗಳಿಗೆ ಗುರಿಯಾಗಬೇಕಾಯಿತು. ಆದರೂ ಮಿತ್ರ ಗ್ರೋನೋವಿಯಸ್‌ನ ಪ್ರಚಾರದಿಂದಾಗಿ ಲಿನೆಯಸ್‌ನ ಹೆಸರು ದೇಶ ವಿದೇಶಗಳಲ್ಲಿ ಪ್ರಸಿದ್ಧಿಯಾಯಿತು. ಲಿನೆಯಸ್‌ನ ಸ್ತುತ್ಯಕಾರ್ಯವನ್ನು ಮೆಚ್ಚಿಕೊಂಡಿದ್ದ ಆತನ ಸಮಕಾಲೀನ ವಿಜ್ಞಾನಿಯೊಬ್ಬನು "ಉತ್ತರ ಆಗಸದಲ್ಲೊಂದು ಹೊಸ ಆಶಾ ತಾರೆ ಜನ್ಮವೆತ್ತಿದೆ" ಎಂದು ಹೊಗಳಿ ಒರೆದಿದ್ದಾನೆ.

ಲಿನೆಯಸ್ ಹಾಲೆಂಡ್‌ನಿಂದ ಹೊರಟು ಮನೆಗೆ ಬರುವ ಮಾರ್ಗವಾಗಿ ಆಗಸ್ಟ್ ತಿಂಗಳಲ್ಲಿ ಆಂಸ್ಟರ್ ಡ್ಯಾಂಗೆ ಭೇಟಿ ಯಿತ್ತು ಅಲ್ಲಿಯೇ ಸ್ವಲ್ಪ ಕಾಲ ತಂಗಿದನು. ಅಲ್ಲಿಯ ಸಸ್ಯ ವಿಜ್ಞಾನಿ ಹಾಗೂ ವೈದ್ಯನಾಗಿದ್ದ ಡಾ|| ಜಾಹನ್ ಬರ್ಮನ್ (Johan Burman) ನನ್ನು ಸಂದರ್ಶಿಸಿ ಆತನ ಸ್ನೇಹ ಬೆಳೆಸಿದನು. ಡಾ|| ಬರ್ಮನ್ ಲಿನೆಯಸ್‌ನನ್ನು ಆಂಸ್ಟರ್ ಡ್ಯಾಂನಲ್ಲೇ ಇನ್ನೂ ಸ್ವಲ್ಪ ಕಾಲ ಉಳಿದುಕೊಂಡಿದ್ದು ಸಿಲೋನ್‌ನಿಂದ ಆತನಿಗೆ ಬಂದಿದ್ದ ಅನೇಕ ಸಸ್ಯಗಳನ್ನು ಗುರುತಿಸಿ ವರ್ಗೀಕರಣ ಮಾಡಿಕೊಡಬೇಕೆಂದು ಬಿನ್ನವಿಸಿಕೊಂಡನು. ಆದರಿಂದಾಗಿ ಲಿನೆಯಸ್ ಆಂಸ್ಟರ್‌ಡ್ಯಾಂನಲ್ಲಿ ಕೆಲಕಾಲ ಉಳಿಯಬೇಕಾಗಿ ಬಂತು. ಆ ಸಮಯದಲ್ಲೇ ಯೂರೋಪ್ ಖಂಡದ ಶ್ರೀಮಂತನಾಗಿದ್ದ, ಡಚ್ ಈಸ್ಟ್ ಇಂಡಿಯಾ ಕಂಪೆನಿ (Dutch East India Company) ಯ ಡೈರೆಕ್ಟರನೂ ಆಗಿದ್ದ ಜಾರ್ಜ್‌ಕ್ಲಿಫರ್ಡ್ ಎಂಬಾತನ ಪಂ

ಚಯವಾಯಿತು. ಈ ಭಾರಿ ಶ್ರೀಮಂತ ಡಾ|| ಬರ್ಮನ್ ಹತ್ತಿರ ರೋಗಿಯಾಗಿ ಚಿಕಿತ್ಸೆ ಪಡೆಯಲು ಬಂದಿದ್ದನು. ಡಾ|| ಬರ್ಮನ್‌ನು ಲಿನೆಯಸ್‌ನನ್ನು ಶ್ರೀಮಂತ ಕ್ಲಿಫರ್ಡ್‌ನ ಖಾಸಗೀ ವೈದ್ಯನನ್ನಾಗಿ ನೇಮಕಮಾಡಿ ಕ್ಲಿಫರ್ಡ್‌ನ ಖಾಯಿಲೆ ಗುಣವಾಗುವ ತನಕ ತನ್ನಲ್ಲಿದ್ದ ಸಸ್ಯ ಸಮೂಹವನ್ನು ಗುರ್ತಿಸಿ ವರ್ಗೀಕರಣ ಮಾಡಿಕೊಡಬೇಕೆಂದು ಕೇಳಿಕೊಂಡನು. ಕ್ಲಿಫರ್ಡ್ ತಂಗಿದ್ದ ಎಸ್ಟೇಟೂ ಆಂಸ್ಟರ್‌ಡ್ಯಾಂಗೆ ದೂರವೇನೂ ಇರಲಿಲ್ಲವಾಗಿ ಲಿನೆಯಸ್ ಒಪ್ಪಿಕೊಂಡನು.

ಡಾ|| ಬರ್ಮನ್ ಲಿನೆಯಸ್ ತಂದಿದ್ದ ಎರಡು ಹಸ್ತ ಪ್ರತಿಗಳನ್ನು ಅಚ್ಚುಮಾಡಿಸಲು ನೆರವಾದನು. ಅವುಗಳಲ್ಲೊಂದು 'ಬಿಬ್ಲಿಯೋಥಿಕಾ ಬಟಾನಿಕ' (Bibliotheca-Botanica) ವಾಗಿತ್ತು. ಈ ಗ್ರಂಥವೇ ವಿಶ್ವದ ಸಸ್ಯವಿಜ್ಞಾನ ಸಾಹಿತ್ಯದ ಪ್ರಥಮ ವಿಷಯಸೂಚೀ ಗ್ರಂಥ (Bibliography) ವಾಯಿತೆನ್ನಬಹುದು. ಮತ್ತೊಂದು ಗ್ರಂಥ- 'ಫಂಡಮೆಂಟಾ ಬಟಾನಿಕ' (Fundamenta Botanica). ಇದರಲ್ಲಿ ಲಿನೆಯಸ್ ಸಸ್ಯಶಾಸ್ತ್ರ ಅಧ್ಯಯನ ಮಾಡಲಿಚ್ಛಿಸುವವರಿಗಾಗಿಯೇ ೩೬೫ ನಿಬಂಧನೆಗಳನ್ನು ಸೂಚಿಸಿದ್ದಾನೆ. (ಒಂದು ವರ್ಷಕ್ಕೆ ೩೬೫ ದಿನಗಳು)

ಲಿನೆಯಸ್ ಕ್ಲಿಫರ್ಡ್‌ನ 'ಡಿ ಹಾರ್ಟೆಕ್ಯಾಂಪ್' (de Harte Kamp) ಎಸ್ಟೇಟ್‌ನಲ್ಲಿ ಆತ ಕೊಡುತ್ತಿದ್ದ ಆಕರ್ಷಕ ಸಂಭಾವನೆಯನ್ನು ಸ್ವೀಕರಿಸಿ, ಕೊನೆಗೆ ಆತನ ತೋಟ ಮತ್ತು ಗ್ರಂಥಾಲಯಗಳ ಮೇಲ್ವಿಚಾರಣೆಯನ್ನೂ ನೋಡಿಕೊಂಡನು. ಲಿನೆಯಸ್ ತನ್ನ ಜೀವಿತಕಾಲದಲ್ಲೇ, ಆರ್ಥಿಕ ಮುಗ್ಗಟ್ಟಿಲ್ಲದೆ ಅತ್ಯಂತ ಸುಖಸಂತೋಷಗಳಿಂದ ಕಳೆದ ಅವಧಿಯೆಂದರೆ ಆತ

ಕ್ಲಿಫರ್ಡ್‌ನ ಆಶ್ರಯದಲ್ಲಿದ್ದ ದಿನಗಳು. ಆ ಕಾಲದಲ್ಲೇ ಆತ ಪ್ರಕಟಿಸದೆ ತನ್ನಲ್ಲಿ ಉಳಿದಿದ್ದ ಎಷ್ಟೋ ಹಸ್ತಪ್ರತಿಗಳನ್ನು ಕ್ಲಿಫರ್ಡ್‌ನ ವೆಚ್ಚದಲ್ಲೇ ಅಚ್ಚು ಹಾಕಿಸಿದನು. ಆ ಅದೃಷ್ಟದ ಪರ್ವಕಾಲದಲ್ಲಿ ಪ್ರಕಟವಾಗಿ ಲಿನೆಯಸ್‌ಗೆ ಹೆಸರು ತಂದ ಪ್ರಮುಖ ಗ್ರಂಥಗಳೆಂದರೆ ೧೭೩೭ರಲ್ಲಿ ಪ್ರಕಟವಾದ "ಜನೆರಾ ಪ್ಲಾಂಟಾರಂ" (Genera Plantarum), (ಆಗ ಗೊತ್ತಿದ್ದ ಎಲ್ಲಾ ಜಾತಿಯ ಗಿಡಗಳ ನಾಮಾಂಕಿತಗಳೊಂದಿಗೆ), "ಫ್ಲೋರಾ ಲಪ್ಪೋನಿಕಾ" (Flora Lapponica), "ಕ್ರಿಟಿಕಾ ಬಟಾನಿಕಾ" (Critica Botanica) (ಸಸ್ಯ ನಾಮಕರಣದ ಕಾಯಿದೆ-ಕಟ್ಟಳೆಗಳು). ಆತ ಹಾಲೆಂಡಿನಲ್ಲಿದ್ದಾಗ ಪ್ರಕಟವಾದ ಲಿನೆಯಸ್ಸಿನ ಗ್ರಂಥಗಳ ಸಂಖ್ಯೆ-೧೪! ಕೊನೆಗೆ ತನ್ನ ಆಶ್ರಯದಾತ ಕ್ಲಿಫರ್ಡ್‌ನ ಸದಿಚ್ಛೆಯ ಮೇರೆಗೆ ಅಂದವಾದ ಸಸ್ಯ ಚಿತ್ರಗಳ ಸಮೇತ ಪೂರ್ಣ ೪೫೦ ಪುಟಗಳ ಸುಂದರವಾದ "ಹೋರ್ಟಸ್ ಕ್ಲಿಫೋರ್ಟಿಯಾನಸ್" (Hortus Cliffortianus) ಎಂಬ ಗ್ರಂಥವನ್ನು ಬರೆದು ಪ್ರಕಟಿಸಿದನು. ಇದನ್ನು ಬರೆಯಲು ಲಿನೆಯಸ್‌ನಿಗೆ ೯ ತಿಂಗಳು ಬೇಕಾಯಿತು. ಉಷ್ಣವಲಯ ಹಾಗು ಸಮಶೀತೋಷ್ಣವಲಯದಲ್ಲೂ ಮತ್ತು ಕ್ಲಿಫರ್ಡ್‌ನ ತೋಟದಲ್ಲೂ ಬೆಳೆದಿದ್ದ ಗಿಡಗಳ ಹೆಸರು, ವಿವರಣೆಯ ಜೊತೆಗೆ ಅಂದವಾದಚಿತ್ರಗಳೂ ಇದ್ದುವು. ಈ ಕೃತಿ ಅಂದಿನ ವರ್ಗೀಕರಣ ತಜ್ಞರಿಗೆತುಂಬಾ ಪ್ರಯೋಜನಕಾರಿಯಾಯಿತು. ಅಲ್ಲದೆ ಅಮೆರಿಕೆಯಿಂದ ಬಂದಿದ್ದ ಎಷ್ಟೋ ಗಿಡಗಳನ್ನು ವರ್ಗೀಕರಣ ಮಾಡಿ ವಿವರಣಾತ್ಮಕವಾಗಿ ಪಟ್ಟಿ ಮಾಡಲು ಕ್ಲಿಫರ್ಡ್‌ನಿಗೂ ಸಹ ಈ ಗ್ರಂಥ ಸಹಾಯಕವಾಯಿತು.

ಲಿನೆಯಸ್‌ಗೆ ಕ್ಲಿಫರ್ಡ್‌ನ ಸಹಾಯ ಮತ್ತು ಸಹಕಾರಗಳಿಂದ ೧೭೩೬ರಲ್ಲಿ ಇಂಗ್ಲೆಂಡಿಗೆ ಹೋಗುವ ಒಂದು ಸದವಕಾಶವೂ ದೊರಕಿತ್ತು. ಆತ ಇಂಗ್ಲೆಂಡ್‌ಗೆ ಭೇಟಿಯಿತ್ತಾಗ ಆ ದೇಶದ ರಾಯಲ್ ಸೊಸೈಟಿಯ ಅಧ್ಯಕ್ಷನಾಗಿದ್ದ ಸರ್ ಹಾನ್ಸ್ ಸ್ಲೋಯನ್ (Hans Sloane)ನನ್ನು ಕಂಡು ಮಾತಾಡಿದನು. ಆಕ್ಸ್‌ಫರ್ಡ್‌ಗೆ ಭೇಟಿಯಿತ್ತಾಗ ಅಲ್ಲಿನ ಖ್ಯಾತ ಪ್ರಾಧ್ಯಾಪಕ ಡಿಲ್ಲೇನಿಯಸ್ (Dillenius)ನ ಸಂದರ್ಶನ ಮಾಡಿದನು. ಪ್ರಾ|| ಡಿಲ್ಲೇನಿಯಸ್‌ನು ಲಿನೆಯಸ್ಸಿನ ವರ್ಗೀಕರಣ ಪದ್ಧತಿಯನ್ನು ಮನಸಾರೆ ಮೆಚ್ಚಿಕೊಂಡು, ಲಿನೆಯಸ್ ಆಕ್ಸ್‌ಫರ್ಡ್‌ನಲ್ಲೇ ಇದ್ದು ವಿದ್ಯಾರ್ಥಿಗಳಿಗೆ ಸಸ್ಯಶಾಸ್ತ್ರ ಬೋಧಿಸುವುದಾದರೆ ತನಗೆ ಬರುವ ಸಂಬಳದಲ್ಲಿ ಅರ್ಧ ಭಾಗವನ್ನು ಆತನಿಗೆ ಸಂಭಾವನೆಯಾಗಿ ಕೊಡುವುದಾಗಿ ಸೂಚಿಸಿದನು. ಆದರೆ ಇಂತಹ 'ಸಂಭಾವನಾ ಕೊಡುಗೆ'ಗಳು ಲಿನೆಯಸ್‌ನಿಗೇಕೋ ಹಿಡಿಸಲಿಲ್ಲ. ಆಗಲೇ ಮತ್ತೊಬ್ಬ ಡಚ್ ಪ್ರಜೆಯು ಲಿನೆಯಸ್‌ನನ್ನು ಸೂರಿನಾಮ ಅಥವಾ ಗುಡ್ ಹೋಪ್ ಭೂಶಿರಗಳಲ್ಲಿರುವ ಸಸ್ಯಗಳನ್ನು ಅನ್ವೇಷಣೆಮಾಡಲು ಆದರದ ಆಹ್ವಾನವಿತ್ತಿದ್ದನು. ಇದನ್ನೂ ಆತ ತಳ್ಳಿಹಾಕಿದನು.

## ಮರಳಿ ತಾಯ್ನಾಡಿಗೆ

ಈ ಕೆಲಸ ಕಾರ್ಯಗಳೆಲ್ಲದರ ಮಧ್ಯೆ ತಾಯ್ನಾಡಿನ ಹಾಗೂ ಪ್ರೇಯಸಿಯ ಕರೆ ಇದ್ದೇ ಇತ್ತು. ೧೭೩೮ರ ಏಪ್ರಿಲ್‌ನಲ್ಲಿ ಹಾಲೆಂಡನ್ನು ಹಾಗೂ ಆತನಿಗಿದ್ದ ಅಪಾರ ಹಿತೈಷಿಗಳು ಮತ್ತು ಸ್ನೇಹಿತರನ್ನು ಬೀಳ್ಕೊಟ್ಟು ಹೊರಡುವ ಮುನ್ನ ಆತನ ಮಿತ್ರ ಆರ್ಟೇಡಿಯ (Artedia) "ಇಕ್ತಿಯೋ

ಲೋಗಿಯಾ" (Ichthyologia) ಗ್ರಂಥವನ್ನು ಪರಿಷ್ಕಾರ ಮಾಡಿ ಹೇಗೋ ಪ್ರಕಟಿಸಿದನು. ಈ ಗ್ರಂಥ ೧೭೩೮ರಲ್ಲಿ ಪ್ರಕಟವಾಗಿ ಆ ವಿಷಯದ ಅಧ್ಯಯನಕ್ಕೆ ನಾಂದಿಯಾಗಿ ಒಂದು ಮೂಲಭೂತವಾದ ಆಧಾರ ಗ್ರಂಥವಾಯಿತು. ಆರ್ಟೇಡಿಯ ಉಪ್ಪಸಾಲ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಲಿನೆಯಸ್‌ನ ಸಹ-ವಿದಾರ್ಥಿ ಮಿತ್ರ ನಾಗಿದ್ದನು. ಒಂದು ರಾತ್ರಿ ಆತ ಆಂಸ್ಟರ್‌ಡಾಂನ ಕಾಲುವೆ ಯಲ್ಲಿ ಮುಳುಗಿ ಮೃತನಾದನು.

ತಾಯ್ನಾಡಿಗೆ ಬರುವ ಮಾರ್ಗವಾಗಿ ಲಿನೆಯುಸ್ ಪ್ಯಾರಿಸ್ ನಗರಕ್ಕೂ ಭೇಟಿಯಿತ್ತಿದ್ದನು. ಅಲ್ಲಿನ "ಅಕೇ ಡ್ಯಮಿಕ್ ಡೆಸ್ ಸೈನ್ಸ್‌ಸ್" (Academic des Sciences) ಸಂಸ್ಥೆಗೆ ಭೇಟಿ ಕೊಟ್ಟು, ಅಲ್ಲಿಯ ಖ್ಯಾತ ವಿಜ್ಞಾನಿಗಳಾದ ಡಿ ಜೆಸ್ಸಿಯಾ (De Jessia) ಸಹೋದರರು ಮತ್ತು ಅನೇಕ ವಿಜ್ಞಾನಿಗಳೊಡನೆ ಕಲೆತು ಮಾತಾಡಿ ದನು. ಕೊನೆಗೆ ಆ ಸಂಸ್ಥೆ (Academy) ಲಿನೆಯಸ್‌ನನ್ನು ಒಬ್ಬ ಸದಸ್ಯನನ್ನಾಗಿ (Corresponding member) ನೇಮಕ ಮಾಡಿ ತನ್ನ ಗೌರವ ಸೂಚಿಸಿತು. ಬರ್ನಾರ್ಡ್-ಡಿ-ಜೆಸ್ಸಿಯಾನ ಜೊತೆಯಲ್ಲಿದ್ದು ಒಂದು ವಾರ ಫ್ರಾನ್ಸ್‌ನಲ್ಲಿ ವೀಕ್ಷಣಾ ಮತ್ತು ಸಂಗ್ರಹಣಾ ಪ್ರವಾಸ ಮಾಡಿ ಬಂದನು.

ಆದರೆ ಎಲ್ಲಿ ಹೋದರೂ ಅಲ್ಲಿ ಬಹಳ ಕಾಲವಿದ್ದು ಪ್ರಕೃತಿ ಅನ್ವೇಷಣೆ ಮಾಡಿ ಅಧ್ಯಯನ ಮಾಡಲು ಸಾಧ್ಯವಾಗು ತ್ತಿರಲಿಲ್ಲ. ಏಕೆಂದರೆ ತನ್ನ ಮಾವ ಮತ್ತು ಭಾವೀ ಪತ್ನಿಗೆ ಮರಳಿ ಬರುವುದಾಗಿ ಭರವಸೆಯಿತ್ತಿದ್ದ ಕಾಲಾವಧಿ ಮೀರಿ ಹೋಗಿತ್ತು. ಅದರಿಂದಾಗಿ ಆತ ಫ್ರಾನ್ಸ್ ಬಿಟ್ಟು ನೇರವಾಗಿ

ತಾಯ್ನಾಡಿಗೆ ಬಂದನು. ಬಂದು ಇಳಿದ ಕೂಡಲೇ ಸ್ಟೆನ್‌ಬ್ರೋಹಲ್ಟ್‌ಗೆ (Stenbrohult) ಹೋಗಿ ಅಲ್ಲಿದ್ದ ತನ್ನ ಮುಪ್ಪಾದ ತಂದೆಯ ದರ್ಶನ ಮಾಡಿ, ತಾನು ಹಾಲೆಂಡಿನಲ್ಲಿ ಪ್ರಕಟಿಸಿ ಕೀರ್ತಿಗಳಿಸಿದ ಅನೇಕ ಕೃತಿಗಳನ್ನು ಆತನ ಪಾದಾರವಿಂದದಲ್ಲಿ ಸಮರ್ಪಣೆ ಮಾಡಿ ಕೃತಾರ್ಥನಾದನು.

ಮೂರೂವರೆ ವರ್ಷಗಳ ತನಕ ಸಾರಾಲೀಸ ತನ್ನ ಇನಿಯನ ಬರುವಿಕೆಗಾಗಿ ಚಾತಕ ಪಕ್ಷಿಯಂತೆ ಕಾಯಬೇಕಾಯಿತು. ಆ ಮೂರೂವರೆ ವರ್ಷಗಳಂತೂ ಆಕೆಗೆ ಅಂಧಕಾರವನ್ನೇ ತಂದಿದ್ದುವು. ಸದಾ ಇನಿಯನನ್ನು ಮನದಲ್ಲಿ ನೆನೆಯುತ್ತಿದ್ದರೂ ಆಕೆ ಲಿನೆಯಸ್‌ನ ಹಸ್ತಪ್ರತಿಗಳನ್ನು, ಬಿಟ್ಟು ಹೋಗಿದ್ದ ಇತರ ಸಂಶೋಧನಾ ಪತ್ರಗಳನ್ನು ಪರಿಷ್ಕರಿಸಿ, ಅವನ್ನೆಲ್ಲಾ ಸಂಪಾದಿಸಿ ಮುದ್ರಿಸುವ ಘನತರ ಕಾರ್ಯದಲ್ಲಿ ತೊಡಗಿದ್ದಳು.

ಇಷ್ಟು ಅಲ್ಪಾವಧಿಯಲ್ಲೇ ಅಷ್ಟೊಂದು ಫಲಪ್ರದವಾದ ಕಾರ್ಯಸಾಧನೆ ಸಾಧ್ಯವೇ? ಎಂದು ಯಾರಿಗಾದರೂ ಅನುಮಾನ ಬರುವುದು ಸಹಜ. ಈ ತರುಣ ವಿಜ್ಞಾನಿ ತಾಯ್ನಾಡಿನಲ್ಲಿದ್ದಾಗ ಒಂದು ಗ್ರಂಥವನ್ನಾದರೂ ಪ್ರಕಟಿಸಲು ಸಾಧ್ಯವಿಲ್ಲದಿದ್ದು, ಮರಳಿ ಬಂದಾಗ ತನ್ನೊಡನೆ ಪ್ರಕಟವಾಗಿ ಜಗತ್‌ಪ್ರಸಿದ್ಧಿಯಾದ ಒಂದು ಗ್ರಂಥಮಾಲೆಯನ್ನೇ ಹೊತ್ತು ತಂದಿದ್ದನು. ಒಬ್ಬ ವ್ಯಕ್ತಿಯು ಇಡೀ ಜೀವಮಾನದಲ್ಲಿ ಮಾಡಲಾರದಂತಹ ಮಹತ್ಸಾಧನೆಯನ್ನು ಈ ತರುಣ ಲಿನೆಯಸ್ ಅಲ್ಪಾವಧಿಯಲ್ಲೇ ಮಾಡಿ ಮುಗಿಸಿದ್ದನು.

ಮತ್ತೊಂದು ಆಶ್ಚರ್ಯದ ಸಂಗತಿಯೆಂದರೆ ಆತ ಹೋದೆಡೆಯಲ್ಲೆಲ್ಲಾ ಅಷ್ಟೊಂದು ಹಿತೈಷಿಗಳು ಹಾಗೂ

ಮಿತ್ರರನ್ನು ಹೇಗೆ ಗಳಿಸುತ್ತಿದ್ದನೆಂಬುದು. ಈ ಪ್ರತಿಭಾ ಸಂಪನ್ನ ಅದೃಷ್ಟವಂತನಲ್ಲಿ ಜನರನ್ನಾಕರ್ಷಿಸುವ ಅಯಸ್ಕಾಂತ ದಂತಹ ಗುಣವಿತ್ತೆಂದು ಕಾಣುತ್ತದೆ. ಆದುದರಿಂದಲೋ ಏನೋ ಆತನನ್ನು ಕಂಡು ಕೇಳಿದವರೆಲ್ಲಾ ಆ ಕ್ಷಣವೇ ಆತನ ಹಿತೈಷಿ ಗೆಳೆಯರಾಗಿ ಅವನ ಕಾರ್ಯಕ್ಕೆ ಉದಾರ ಮನಸ್ಸಿನಿಂದ ನೆರವಾಗುತ್ತಿದ್ದರು.

ಇಷ್ಟು ಅಲ್ಪಾವಧಿಯಲ್ಲೇ ಅಂತಹ ಮಹತ್ಸಾಧನೆಯನ್ನು ಆತ ಹೇಗೆ ಮಾಡಿದ ಎಂಬುದಕ್ಕೆ ಲಿನೆಯಸ್ ಒಂದು ಕಡೆ– "ನಾನು ನನ್ನ ೨೮ನೇ ವರ್ಷಕ್ಕೆ ಮುಂಚಿತವಾಗಿಯೇ ಇದೆಲ್ಲ ವನ್ನೂ ನಿರೀಕ್ಷಿಸಿದ್ದೆ" ಎಂದು ಹೇಳಿಕೊಂಡಿದ್ದಾನೆ. ಆತನಿಗೆ ತಾರುಣ್ಯದಲ್ಲೇ ಬುದ್ಧಿ ಚತುರತೆ ಪಕ್ವವಾಗಿದ್ದು, ಹಾಲೆಂಡ್‌ಗೆ ಹೋಗುವ ಮುನ್ನ ೮ ವರ್ಷ ಕ್ರಮ ಬದ್ಧವಾದ ಸಸ್ಯಶಾಸ್ತ್ರ ಅಧ್ಯಯನ ನಡೆಸಿದುದರ ಫಲ ಆತನಿಗೆ ಯಶ ತಂದಿತು.

ಲಿನೆಯಸ್ ಸ್ವೀಡನ್ನಿಗೆ ಮರಳಿ ಬಂದ ಮೇಲೆ, ಸಾರಾ ಲೀಸಾಳನ್ನು ವಿವಾಹವಾಗುವ ಮುನ್ನ, ಸ್ಟಾಕ್‌ಹೋಂ (Stockhom) ನಲ್ಲಿ ಹೊಸದಾಗಿ ವೈದ್ಯವೃತ್ತಿಯನ್ನು ಆರಂಭಿ ಸಿದನು. ಆತ ತಾಯ್ನಾಡಿಗೆ ಬಂದು ಬೀಡುಬಿಟ್ಟಾಗ ಅಲ್ಲಿನ ಅಂದಿನ ವಾತಾವರಣ ಸ್ವಲ್ಪ ಕಹಿಯಾಗಿಯೇ ಇತ್ತು. ಸ್ಟಾಕ್‌ ಹೋಂ ಜನರಿಗೂ ಹಾಗೂ ವೈದ್ಯ ವೃತ್ತಿಗೂ ಲಿನೆಯಸ್ ಹೊಸಬನಾದುದರಿಂದ ಇಂತಹ/ಹೆಸರಾಂತ ಸ್ವೀಡಿಷ್ ತರುಣನೂ ಹೊಸ ವೈದ್ಯವೃತ್ತಿಯ ಚೊಚ್ಚಲ ಆಶ್ರಯದ ಪಾಡು ಪಡಬೇಕಾ ಯಿತು. ಒಂದು ತಿಂಗಳು ಆ ವೃತ್ತಿಯಲ್ಲಿ ಕಳೆದನಂತರ ಲಿನೆಯಸ್ ಆಗಾಗಲೇ ಅನೇಕ ಜನರ ಪರಿಚಯ ಮತ್ತು ಗೆಳೆತನ ಬೆಳೆಸಿ, ತನ್ನಲ್ಲಿಗೆ ಬರುವ ರೋಗಿಗಳ ಸಂಖ್ಯೆಯನ್ನು

ಹೆಚ್ಚಿಸಿಕೊಂಡನು. ಆಗ ಆತನಲ್ಲಿಗೆ ಔಷಧೋಪಚಾರಕ್ಕೆ ಬರುತ್ತಿದ್ದವರಲ್ಲಿ ಮೇಧಾವಿ ರಾಜನೀತಿಜ್ಞನಾದ ಮ್ಯಾಸೆನಾಸ್ (Maecenas) ಮತ್ತು ಕೌಂಟ್ ಸಿ ಜಿ. ವಾನ್‌ಟೆಸ್ಸೀನ್ (Count C G. Von Tessin) ರೂ ಇದ್ದರು. ಆತನ ಕೈಯಲ್ಲಿ ಔಷಧೋಪಚಾರ ಪಡೆದ ಭಾಗ್ಯವಂತರಲ್ಲಿ ಸ್ವೀಡನ ಮಹಾರಾಣಿಯೂ ಒಬ್ಬಳಾಗಿದ್ದಳು. ಆತನ ಸೇವಾ ಮನೋಭಾವವನ್ನು ಮೆಚ್ಚಿಕೊಂಡ ರಾಣಿ ಲಿನೆಯುಸ್‌ನನ್ನು ತನ್ನ ಆಪ್ತ ವೈದ್ಯನನ್ನಾಗಿ ನೇಮಿಸಿಕೊಂಡಳು. ಆ ವರ್ಷ ಸ್ವೀಡನ್‌ನಲ್ಲಿ ನಡೆದ ರಿಕ್ಸ್‌ಡಾಗ್ (Riksdog) ಸಮಾರಂಭದಲ್ಲಿ "ಮಾರ್ಷಲ್ ಆಫ್ ದಿ ಹೌಸ್ ಆಫ್ ನೊಬಿಲಿಟಿ" (Marshal of the House of Nobility) ಎಂಬ ಸನದು ಕೊಟ್ಟು ಸನ್ಮಾನಿಸಿದರು.

ಮ್ಯಾಸೆನಾಸ್‌ನು ಸರ್ಕಾರದಿಂದ ಲಿನೆಯುಸ್‌ನಿಗೆ ಖನಿಜ ಶಾಸ್ತ್ರ ಮತ್ತು ಸಸ್ಯ ವಿಜ್ಞಾನಿಗಳನ್ನು ಕುರಿತು ಜನಪ್ರಿಯ ಉಪನ್ಯಾಸಮಾಡಲು ಸಹಾಯ ಧನವನ್ನು ಕೊಡಿಸಿದನಲ್ಲದೆ, ಕೆಲಕಾಲಾನಂತರ ಲಿನೆಯುಸ್‌ನು ನೌಕಾದಳದ ಒಬ್ಬ ಪ್ರಮುಖ ವೈದ್ಯನಾಗಿ ನೇಮಕವಾಗಲೂ ಕಾರಣನಾದನು. ಸ್ಟಾಕ್‌ಹೋಂನಲ್ಲಿದ್ದ ಕೆಲವು ತರುಣರು (Hat Party) ಒಂದು ವೈಜ್ಞಾನಿಕ ಪರಿಷತ್ತನ್ನು ರಚಿಸಲು ಪ್ರಯತ್ನಿಸಿ, ಆ ಸಂಸ್ಥೆ ೧೭೩೯ರಲ್ಲಿ ಪ್ರಥಮವಾಗಿ ಅಸ್ತಿತ್ವಕ್ಕೆ ಬಂದಾಗ ಲಿನೆಯುಸ್‌ನನ್ನೇ ಅದರ ಮೊದಲ ಅಧ್ಯಕ್ಷನನ್ನಾಗಿ ಆಯ್ಕೆಮಾಡಿ, ಆ ಸಂಸ್ಥೆಯ ಆಗು–ಹೋಗುಗಳನ್ನು ರೂಪಿಸಬೇಕೆಂದು ಆತನನ್ನೇ ಕೇಳಿಕೊಳ್ಳಲಾಯಿತು. ಆ ಸಂಸ್ಥೆಯ ಒಂದು ಕಾನೂನೆಂದರೆ ಯಾವುದೇ ವೈಜ್ಞಾನಿಕ ಸಂಶೋಧನಾ ವರದಿಯಾಗಲಿ, ವಿಜ್ಞಾನದ ಪ್ರಕ

ಟಣೆಗಳೇ ಆಗಲಿ, ಅವೆಲ್ಲವೂ ಸ್ವೀಡಿಷ್ ಭಾಷೆಯಲ್ಲೇ ಇರಬೇಕಾಗಿತ್ತು. ಲಿನೆಯುಸ್ ಆ ಪರಿಷತ್ತಿನ ಅಧ್ಯಕ್ಷ ಪೀಠದಿಂದ ಭಾಷಣ ಮಾಡಿದ. ಅದು "ಕ್ರಿಮಿ-ಕೀಟಗಳಲ್ಲಿರುವ ವಿಲಕ್ಷಣಗಳ" (oddities among germs) ನ್ನು ಕುರಿತ ದೀರ್ಘ ಉಪನ್ಯಾಸವಾಗಿತ್ತು. ಆತ ಮೊದಲಿಗೆ ಅಧ್ಯಕ್ಷನಾಗಿ ಮಾಡಿದ ವಿಚಾರಪೂರಿತ ವೈಜ್ಞಾನಿಕ ಭಾಷಣ ಇಂದಿಗೂ ಮುಂದುವರಿಯುತ್ತಾ ಬಂದಿದೆ. ಆತ ಅಂದು ಮಾತೃಭಾಷೆಯಲ್ಲಿ ಮಾಡಿದ ಭಾಷಣ ಪಂಡಿತ ಪಾಮರರಿಗೆಲ್ಲಾ ಅರ್ಥವಾಗುವಂತಿದ್ದು, ಸರಳ ಸುಂದರ ನಿರರ್ಗಳ ಶೈಲಿಯಲ್ಲಿದ್ದು, ಆತನಲ್ಲಡಗಿದ್ದ ಭಾಷಾ ಸಾಹಿತ್ಯ ಶಕ್ತಿಯ ಪ್ರದರ್ಶನಕ್ಕೊಂದು ನಿದರ್ಶನವಾಗಿ ಉಳಿದಿದೆ ಎನ್ನಬಹುದು.

ಲಿನೆಯುಸ್ ಸದಾ ದರಿದ್ರನಾರಾಯಣನ ಸೇವೆಯಲ್ಲೇ ಆನಂದಪಡುತ್ತಿದ್ದನು. ಆತ ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಾ ಕ್ಷಯ, ಗುಹ್ಯ ರೋಗ ಮುಂತಾದ ಭಯಂಕರ ಖಾಯಿಲೆಗಳಿಂದ ನರಳುತ್ತಿದ್ದ ಕಡು ಬಡ ಜನರ ಕಷ್ಟ ಕಾರ್ಪಣ್ಯಗಳನ್ನು ಕಂಡು ಕನಿಕರಪಟ್ಟು, ಅವರಿದ್ದಲ್ಲಿಗೇ ಹೋಗಿ ಅವರಿಗೆ ಔಷಧೋಪಚಾರವನ್ನು ಪುಕ್ಕಟೆಯಾಗಿ ನಡೆಸಿ ಸಂತೋಷಪಟ್ಟು ಮನೆಗೆ ಬರುತ್ತಿದ್ದನು.

ಲಿನೆಯುಸ್ ವೈದ್ಯನಾಗಿದ್ದಾಗ ದಿನಕ್ಕೆ ೧೦ ಗಂಟೆಗಳು ಕೆಲಸ ಮಾಡಿದರೂ ಆತನಿಗೆ ನೆಮ್ಮದಿ ಇರುತ್ತಿರಲಿಲ್ಲ. ಎಂತಹ ಎಂತಹ ಕರ್ಮಯೋಗಿ !

ಲಿನೆಯುಸ್ ವೈದ್ಯವೃತ್ತಿ ಆರಂಭಿಸಿ ಅಷ್ಟಿಷ್ಟು ಹಣ ಮಾಡಿದನಂತರ ಸಾರಾಲೀಸಾಳನ್ನು ತನ್ನ ಮಡದಿಯಾಗಿ ಮನೆ ತುಂಬಿಸಿಕೊಳ್ಳಲು ಎಲ್ಲಾ ವಿಧದಲ್ಲೂ ಶಕ್ತನಾದನು.

೧೭೩೯ರ ಜೂನ್ ತಿಂಗಳಲ್ಲಿ ಲಿನೆಯಸ್ ಸಾರಾ ಲೀಸಾಳನ್ನು ಮನ ವೊಲಿದು ಮದುವೆಯಾದನು. ಇವರ ಪ್ರೇಮ ವಿವಾಹವಾದ ಎರಡು ವರ್ಷದ ನಂತರ ೧೭೪೧ ರಲ್ಲಿ ಆತ ಉಪ್ಪಸಾಲ ವೈದ್ಯ ಕೀಯ ವಿದ್ಯೆಯ ಪ್ರಾಧ್ಯಾಪಕನಾಗಿ ನೇಮಕಗೊಂಡನು. ೧೭೪೨ ರಲ್ಲಿ ಸಸ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕನಾದನು. ಲಿನೆಯೆಸ್ ಪ್ರಾಧ್ಯಾಪಕನಾಗಿ ಅಧ್ಯಾಪನವೃತ್ತಿಯನ್ನಾರಂಭಿಸಿದ ನಂತರ ಆತನ ಜೀವನದ ಹೊಸ ಶಕ ಆರಂಭವಾಯಿತು. ಅಂದಿನಿಂದ ೩೬ ವರ್ಷಗಳ ತನಕವೂ, ಆತನ ಆರೋಗ್ಯ ಕೆಡುವ ವರೆಗೂ, ಆದರ್ಶ ಅಧ್ಯಾಪಕನಾಗಿ ಸರ್ವತೋಮುಖವಾಗಿ ಸೇವೆ ಸಲ್ಲಿಸಿದನು. ಆತನಿಗೆ ದೊರೆತ ಮಧ್ಯಂತರ ಬಿಡುವೆಂದರೆ ಎಸ್ಟೇಟ್ಸ್‌ಗಳ ಕರೆಗೆ ಮನ್ನಣೆಯಿತ್ತು ಸ್ವೀಡನ್ನಿನ ಮತ್ತೆ ಕೆಲವು ಪ್ರಾಂತ್ಯಗಳ ಅನ್ವೇಷಣಾ ಪ್ರವಾಸ ಮಾಡಿದ ಅವಧಿ ಎನ್ನ ಬಹುದು.

ಲಿನೆಯಸ್ ಉಪ್ಪಸಾಲ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾ ಪಕನಾಗಿದ್ದಾಗ ಹಿಂದೆ ಆತನ ವಿದ್ಯಾ ಗುರುವಾಗಿದ್ದು, ಅದೇ ವಿಭಾಗದ ಮುಖ್ಯಸ್ಥನಾಗಿದ್ದ ಡಾ|| ರುಡ್‌ಬೆಕ್‌ನ ಮನೆಯಲ್ಲೇ ವಾಸಿಸುತ್ತಿದ್ದನು. ಒಂದಾನೊಂದು ಕಾಲದಲ್ಲಿ ಆ ಮನೆಯಲ್ಲಿ ಅತಿಥಿಯಾಗಿ, ವಿದ್ಯಾರ್ಥಿಯಾಗಿ ಉಳಿದಿದ್ದನು. ಆದರೆ ಕೆಲ ಕಾಲದನಂತರ ಆತನೇ ಆ ಮನೆಯ ಯಜಮಾನನಾದನಲ್ಲದೆ, ಅದರ ಸುತ್ತಲೂ ಇದ್ದ ಪ್ರಸಿದ್ಧ ಸಸ್ಯ ತೋಟದ ಒಡೆಯನೂ ಆದನು. ಇಂದು ಸ್ವೀಡನ್ ಸರ್ಕಾರ ಲಿನೆಯಸ್ ವಾಸಿಸುತ್ತಿದ್ದ ಆ ಮನೆ ಮತ್ತು ಹೂದೋಟಗಳನ್ನು ರಾಷ್ಟ್ರೀಯ ಸ್ಮಾರಕ ಗಳೆಂದು ಗೌರವಿಸಿ, ಜೋಪಾನವಾಗಿ ಕಾಪಾಡಿಕೊಂಡು ಬಂದಿದೆ. ಆ ಹೂದೋಟ ಲಿನೆಯಸ್ ವರ್ಗೀಕರಣ ಪದ್ಧತಿ

ಗನುಸಾರವಾಗಿ ಓರಣವಾಗಿ ವ್ಯವಸ್ಥಿತವಾಗಿದೆಯಲ್ಲದೆ, ಇಡೀ ಯೂರೋಪ್ ಖಂಡದಲ್ಲೇ ಅದೊಂದು ಅತ್ಯಧಿಕ ಸಂಖ್ಯೆಯ ಶ್ರೀಮಂತ ಸಸ್ಯಗಳ ಆಗರವಾಗಿದೆ.

ಆತನ ಸಂಶೋಧನೆಗೆ ನೆರವಾಗಲು ವಿಶ್ವದಾದ್ಯಂತ ಆತನ ಹಿತೈಷಿಗಳೂ, ಮಿತ್ರರೂ ಹಾಗೂ ವಿದ್ಯಾರ್ಥಿಗಳೂ ಆತನ ಸಸ್ಯತೋಟಕ್ಕೆ ವಿವಿಧ ಜಾತಿಯ ಸಸ್ಯಗಳನ್ನು ಕಳಿಸಿ ಕೊಡುತ್ತಿದ್ದರು. ಅವುಗಳಲ್ಲಿ ಕೆಲವು ಈಗಲೂ ಆತನ ತೋಟದಲ್ಲಿ ಅಂತರರಾಷ್ಟ್ರಿಯ ಸ್ನೇಹ-ದ್ಯೋತಕವಾಗಿ ಬೆಳೆಯುತ್ತಾ ಜೀವಂತ ನಿದರ್ಶನವಾಗಿ ನಿಂತಿವೆ. ಅಂದು ರಷ್ಯಾದ ಜರೀನಾ ಸೈಬೀರಿಯಾದಿಂದ ಕಳಿಸಿಕೊಟ್ಟಿದ್ದ ಗಿಡಗಳು ಇಂದಿಗೂ ಹೂ ಬಿಡುತ್ತಾ ಮಧುರ ಸ್ನೇಹದ ಕಂಪು ಬೀರುತ್ತಿವೆ.

ಲಿನೆಯಸ್ ಸಸ್ಯಶಾಸ್ತ್ರದ ಪ್ರಾಧ್ಯಾಪಕನಾಗುವ ಮುನ್ನ, ಸರ್ಕಾರದ ಆದೇಶದ ಮೇರೆಗೆ ಓಲ್ಯಾಂಡ್ ಮತ್ತು ಗೋತ್ ಲ್ಯಾಂಡ್‌ಗಳ ಅನ್ವೇಷಣಾ ಪ್ರವಾಸ ಮಾಡಿ ಬಂದನು. ತನ್ನ ಪ್ರವಾಸದ ವರದಿಯನ್ನು "ಓಲ್ಯಾಂಡ್‌ಸ್ಕಾ ಓಚ್ ಗೋತ್ ಲ್ಯಾಂಡೆಸ್ಕಾ ರೇಸಾ" ಎಂಬ ಗ್ರಂಥದಲ್ಲಿ ಬರೆದು ೧೭೪೫ರಲ್ಲಿ ಅದನ್ನು ಪ್ರಕಟಿಸಿದನು. ಆ ಗ್ರಂಥದಲ್ಲೇ ಲಿನೆಯಸ್ ಮೊಟ್ಟ ಮೊದಲಿಗೆ, ಸಸ್ಯಗಳಿಗೆ ಹೊಸವಿಧಾನದಲ್ಲಿ ನಾಮಕರಣ ಮಾಡುವ ಪದ್ಧತಿಯನ್ನು ಬಳಸಿದ್ದನು. ಈ ಬಗ್ಗೆ ಆತನದೇ ಪ್ರಥಮ ಪ್ರಯೋಗವಾಯಿತು.

ಲಿನೆಯಸ್ ಉಪ್ಪಸಾಲ ವಿಶ್ವವಿದ್ಯಾನಿಲಯದಲ್ಲೆಲ್ಲಾ ಪ್ರತಿಭಾ ಸಂಪನ್ನನಾದ ಒಬ್ಬ ದಕ್ಷ ಅಧ್ಯಾಪಕನೆಂದು ಜನ ಪ್ರಿಯನಾಗಿದ್ದನು. ಅಧ್ಯಾಪಕನಾಗಿ ಸಸ್ಯವಿಜ್ಞಾನ ಮತ್ತು ವೈದ್ಯವಿದ್ಯೆಯನ್ನು ಬೋಧಿಸುವುದರ ಜೊತೆಗೆ ಸಸ್ಯತೋಟಗಳ

ಮೇಲ್ವಿಚಾರಣೆಯೂ ಆತನಿಗೆ ಸೇರಿತ್ತು. ಲಿನೆಯಸ್ ಅಧಿಕಾರ ವಹಿಸಿಕೊಂಡ ನಂತರ ಅನೇಕ ಹೊಸ ಸಸ್ಯಗಳನ್ನು ತರಿಸಿ, ಸರಿಯಾಗಿ ವ್ಯವಸ್ಥಿತಗೊಳಿಸಿ ಬೆಳೆಸಿದನು. ಸಸ್ಯಶಾಸ್ತ್ರದ ವಿದ್ಯಾರ್ಥಿಗಳು ಆಗಾಗ್ಗೆ ಉಪ್ಪಸಾಲದ ಸುತ್ತಮುತ್ತ ಪ್ರವಾಸ ಮಾಡಿ ಸಸ್ಯ ಮಾದರಿಗಳನ್ನು ಕಲೆ ಹಾಕಬೇಕಾಗಿತ್ತು. ಲಿನೆಯಸ್ ಪ್ರಕಟಿಸಿದ ಅನೇಕ ಗ್ರಂಥಗಳು ಆತನ ಅನೇಕ ವಿದ್ಯಾರ್ಥಿಗಳು ವಿವಿಧ ಪ್ರಾಂತ್ಯಗಳಲ್ಲಿ ಅನ್ವೇಷಣಾ ಪ್ರವಾಸ ನಡೆಸಿ ಸಲ್ಲಿಸಿದ್ದ ವರದಿಗಳೆನ್ನಬಹುದು. ಲಿನೆಯಸ್‌ನ ಖ್ಯಾತಿಯನ್ನರಿತು ವಿದೇಶಗಳಿಂದ ಎಷ್ಟೋ ವಿದ್ಯಾರ್ಥಿಗಳು ಆತನಿಂದ ವಿದ್ಯಾಲಾಭ ಪಡೆಯಲು ಉಪ್ಪಸಾಲ ವಿಶ್ವವಿದ್ಯಾನಿಲಯಕ್ಕೆ ಬಂದಿದ್ದರು. ಆತನ ವಿದ್ಯಾರ್ಥಿಗಳು ಹೊಸ ಹೊಸ ಸಸ್ಯಗಳು ಮತ್ತು ಪ್ರಾಣಿಗಳನ್ನು ಪತ್ತೆ ಹಚ್ಚಲು ವಿಶ್ವದ ಬಹುಪಾಲು ಗೊತ್ತಿರುವ ಪ್ರದೇಶಗಳಿಗೆಲ್ಲಾ ಅನ್ವೇಷಣಾ ಪ್ರವಾಸ ಕೈಗೊಂಡಿದ್ದರು. ಈ ರೀತಿ ಪ್ರವಾಸ ಕೈಗೊಂಡ ಸಾಹಸಿ ವಿದ್ಯಾರ್ಥಿಗಳಲ್ಲಿ ಅನೇಕರು ಕಷ್ಟನಷ್ಟಗಳಿಗೀಡಾದರು.

ಹ್ಯಾಸಲ್ ಕ್ವಿಸ್ಟ್ (Hassel quist) ಏಷ್ಯಾ ಮೈನರ್‌ನಲ್ಲೂ, ಫಾರ್ಸ್‌ಕಾಲ್ (Forsskal) ನು ದಕ್ಷಿಣ ಅರೇಬಿಯಾದಲ್ಲೂ, ಲೋಫ್ಲಿಂಗ್(Lofling)ನು ವೆನಿಜೂಲಾದಲ್ಲೂ, ತನ್‌ಬರ್ಗ್ (Thunberg) ನು ದಕ್ಷಿಣ ಆಫ್ರಿಕಾ ಮತ್ತು ಜಪಾನ್‌ನಲ್ಲೂ ಪ್ರವಾಸವೆಸಗಿದರು. ಆತನ ಶಿಷ್ಯರಾದ ಸೊಲಾಂಡರ್ (Solander) ಮತ್ತು ಜೋಸೆಫ್ ಬ್ಯಾಂಕ್ಸ್ (Joseph Banks) ರೂ ಕ್ಯಾಪ್ಟನ್ ಕುಕ್ (Captain Cook) ನ್ಯೂಜಿಲೆಂಡಿಗೆ ಪ್ರಥಮ ಪ್ರವಾಸ ಯಾನ ಮಾಡಿದಾಗ ಆತನೊಡನೆ ತೆರಳಿದ್ದರು. ಕ್ಯಾಪ್ಟನ್

ಕುಕ್ ಎರಡನೆಯ ಸಾರಿ ಪ್ರವಾಸ ಹೊರಟಾಗ ಆತನ ಜೊತೆಗೆ ಸ್ಪಾರ್‌ಮನ್‌ನೂ (Sperrman) ಇದ್ದು ಆಸ್ಟ್ರೇಲಿಯಾದ ಪೂರ್ವಕರಾವಳಿಯನ್ನು ನೋಡಿಕೊಂಡು, ಅಂದು ಯಾರೂ ಭೇಟಿಯಿತ್ತಿರದ ದಕ್ಷಿಣ ಧ್ರುವಕ್ಕೂ (South Pole) ಭೇಟಿ ಕೊಟ್ಟು ಬಂದರು. ಆತನ ಶಿಷ್ಯನಾದ ಕ್ಲಾಮ್ (Kalm) ಎಂಬಾತ ತನ್ನ ಉತ್ತರ ಅಮೆರಿಕಾ ಪ್ರವಾಸವನ್ನು ಕುರಿತು ಒಂದು ವರದಿಯನ್ನು ಪ್ರಕಟಿಸಿದನು. ಓಸ್‌ಬೆಕ್ (Osbeck) ಎಂಬಾತ ತನ್ನ ಚೈನಾ ಯಾತ್ರೆಯನ್ನು ಕುರಿತು ವರದಿ ಮಾಡಿದನು. ಆದರೆ ಹ್ಯಾಸಲ್ ಕ್ವಿಸ್ಟ್‌ನ ಈಜಿಪ್ಟ್ ಮತ್ತು ಪ್ಯಾಲಸ್ತೈನ್ ಪ್ರವಾಸ ವರದಿಯನ್ನೂ, ಲೋಫ್ಲಿಂಗ್‌ನ ಸ್ಪೈನ್ ಮತ್ತು ದಕ್ಷಿಣ ಅಮೆರಿಕೆಯ ವರದಿಯನ್ನೂ ಅವರ ಮರಣಾನಂತರ ಪ್ರಕಟಮಾಡುವ ದುಃಖದ ಕಾರ್ಯ ಅವರ ಗುರುವಾದ ಲಿನೆಯಸ್‌ನ ಪಾಲಿಗೆ ಬಂದುದು ದುರ್ದೈವ. ಸ್ಪಾರ್‌ಮನ್ನನ ಕೇಪ್ ಪ್ರವಾಸ ವರದಿ, ಮತ್ತು ತನ್‌ಬರ್ಗನ ಪ್ರವಾಸ ಕಥನಗಳು ಲಿನೆಯಸ್ ಗತಿಸಿದ ಎಷ್ಟೋ ವರ್ಷಗಳ ನಂತರ ಪ್ರಕಟವಾದುವು.

ಈ ರೀತಿ ಪ್ರವಾಸ ಕೈಗೊಂಡ ಸಾಹಸೀ ವಿದ್ಯಾರ್ಥಿಗಳಲ್ಲಿ ಸುಮಾರು $\frac{1}{3}$ ಭಾಗ ವಿದ್ಯಾರ್ಥಿಗಳಾದರೂ ಗತಿಸಿದ್ದಾರೆಂದು ಕೆಲವರು ಅಂದಾಜು ಮಾಡಿದ್ದಾರೆ. ಇವರಲ್ಲಿ ಕೆಲವರನ್ನು "ಸಿಸ್ಟೆಮಾ ನ್ಯಾಚುರೇ" ಗ್ರಂಥದಲ್ಲಿ ಸ್ಮರಿಸಿ ಲಿನೆಯುಸ್ ತನ್ನ ಶ್ರದ್ಧಾಂಜಲಿಯನ್ನರ್ಪಿಸಿದ್ದಾನೆ. ಇಂತಹವರಲ್ಲಿ ಕ್ಯಾಪ್ಟನ್ ಕುಕ್ ಜೊತೆಗಿದ್ದು ಗತಿಸಿದ ಲಂಡನ್ನಿನ ಸೊಲಾಂಡರ್ ಒಬ್ಬ.

ಲಿನೆಯಸ್ ಒಬ್ಬ ಜನಪ್ರಿಯ ಅಧ್ಯಾಪಕನಾಗಿದ್ದುದರಿಂದ ಆತ ಮಾಡುತ್ತಿದ್ದ ಉಪನ್ಯಾಸಕ್ಕೆ ವಿದ್ಯಾರ್ಥಿಗಳು ಕಿಕ್ಕಿರಿದು

ಕೊಠಡಿಯು ತುಂಬಾ ಕುಳಿತಿರುತ್ತಿದ್ದರು. ಅವನ ಉಪನ್ಯಾಸ ಗಳು ನಿಜಕ್ಕೂ ಸ್ವಾರಸ್ಯವಾಗಿದ್ದುವಲ್ಲದೆ ವಿಚಾರ ಪೂರಿತ ವಾಗಿರುತ್ತಿದ್ದುವು. ಲಿನೆಯಸ್ ಡಯಾಟಿಕ್ಸ್ (Diatics) ಮೇಲೆ ಮಾತಾಡುತ್ತಾನೆಂದು ಗೊತ್ತಾದಾಗಲಂತು ಉಪ್ಪಸಾಲ ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗಗಳ ವಿದ್ಯಾರ್ಥಿಗಳೂ ಆತನ ತರಗತಿಯ ತುಂಬಾ ಭರ್ತಿಯಾಗಿರುತ್ತಿದ್ದರು. ಆತನ ಅನ್ವೇ ಷಣಾ ಸಂಚಾರಗಳಿಗೂ (Excursions) ಸುಮಾರು ೨೦೦ ಕ್ಕೂ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಬರುತ್ತಿದ್ದರೆಂದು ನಂಬಲಾಗಿದೆ. ಆತನ ಪ್ರವಾಸವು ತುಂಬಾ ಅಚ್ಚುಕಟ್ಟಾಗಿ ವ್ಯವಸ್ಥಿತವಾಗಿತ್ತೆಂದೂ, ಪ್ರವಾಸ ತಂಡದಲ್ಲಿ ಒಬ್ಬ ವ್ಯಾಖ್ಯಾನ ಕಾರ, ಖಜಾಂಚಿ, ಟಿಪ್ಪಣಿಕಾರ, ಶಿಸ್ತುಪಾಲಕರಿರುತ್ತಿದ್ದರಲ್ಲದೆ ಲಿನೆಯಸ್ ತಾನೇ ಮುಖಂಡತ್ವ ವಹಿಸುತ್ತಿದ್ದನೆಂದೂ ಪ್ರತ್ಯಕ್ಷ ವೀಕ್ಷಣೆ ಮಾಡಿದ ಜಾಕ್‌ಸನ್ ಎಂಬಾತ (೧೯೨೦) ವರದಿ ಮಾಡಿದ್ದಾನೆ.

ಲಿನೆಯಸ್ ಬೋಧನೆಯನ್ನು ಬಿಟ್ಟು ಉಳಿದ ವೇಳೆಯಲ್ಲಿ ಕೆಲವು ಮುಖ್ಯವಾದ ಗ್ರಂಥಗಳನ್ನು ಬರೆದನು. "ಫಾನಾ ಸ್ವೆಸೀಕಾ" (Fauna Svecica) ಎಂಬ ಗ್ರಂಥದಲ್ಲಿ ಔಷಧಿಗೆ ಬಳಸುತ್ತಿದ್ದ ಅನೇಕ ವಸ್ತುಗಳನ್ನು ಕ್ರಮ ಬದ್ಧವಾಗಿ ವರ್ಗೀ ಕರಣ ಮಾಡಿದ್ದನು. ಫಾನಾ (Fauna) ಎಂಬ ಪದದ ಸೃಷ್ಟಿಕರ್ತ ಲಿನೆಯಸ್‌ನೇ! ಮತ್ತೊಂದು ಗ್ರಂಥ: "ಫ್ಲೋರಾ ಸ್ವೆಸೀಕಾ" (Flora Svecica) ೧೭೪೫ರಲ್ಲಿ. ಅಲ್ಲದೆ ಆತ ಮೊದಲೇ ಪ್ರಕಟಿಸಿದ್ದ "ಸಿಸ್ಟೆಮಾ ನ್ಯಾಚುರೇ" ಗ್ರಂಥವನ್ನು ಮತ್ತೊಮ್ಮೆ ತಿದ್ದಿ, ಪರಿಷ್ಕಾರ ಮಾಡಿ ೨೫೦೦ ಪುಟಗಳ ಬೃಹತ್ ಸಂಪುಟದಲ್ಲಿ ಪ್ರಕಟಿಸಿದನು. ಹಾಗೆಯೇ "ಜನೆರಾ

ಪ್ಲಾಂಟಾರಂ" ಗ್ರಂಥವನ್ನು ತಿದ್ದಿ ವಿಸ್ತರಿಸಿ ಮತ್ತೆ ಪ್ರಕಟಿಸಿದನು.

೧೭೫೩ರಲ್ಲಿ ಲಿನೆಯಸ್ ತನ್ನ ಅಂದಾಜಿನಂತೆ ಹೊಸದಾಗಿ "ಸ್ಪೀಸೀಸ್ ಪ್ಲಾಂಟಾರಮ್" (Spicies Plantarum) ಎಂಬ ಗ್ರಂಥವನ್ನು ಬರೆದನು. ಆ ಗ್ರಂಥದಲ್ಲಿ, ಆಗ ತಿಳಿದು ಬಂದಿದ್ದ ಸುಮಾರು ೬೦೦೦ ಸಸ್ಯಗಳ ವರ್ಣನೆ ಮತ್ತು ಇತರ ವಿವರಗಳಿದ್ದುವು ಈ ಗ್ರಂಥವನ್ನೇ ಆತ ತನ್ನ "ಮೇರುಕೃತಿ" ಎಂದು ಹೇಳಿಕೊಂಡಿದ್ದಾನೆ.

## ದ್ವಿನಾಮ ಪದ್ಧತಿ

ಪ್ರಥಮತಃ ಸಜೀವಿಗಳಿಗೆ "ದ್ವಿನಾಮ" (Binomial Nomenclature) ಪದ್ಧತಿಯನ್ನು ಜಾರಿಗೆ ತಂದವನೆಂದರೆ ಲಿನೆಯಸ್. ಈ ಎರಡು ಹೆಸರಿನ ನಾಮಕರಣ ಕ್ರಮವನ್ನು ಆತನೇ ತನ್ನ 'ಸ್ಪೀಸೀಸ್ ಪ್ಲಾಂಟಾರಮ್' ಗ್ರಂಥದಲ್ಲಿ ಬಳಕೆಗೆ ತಂದನು ಆತ ಪ್ರತಿಯೊಂದು ಸಸ್ಯ ಅಥವಾ ಪ್ರಾಣಿಗೂ ಒಂದು ಜಾತಿ (ಕುಲ) ಸೂಚಕ ಹೆಸರು (Generic Name) ಮತ್ತೊಂದು ಭೇದ ಸೂಚಕ (Specific Name) ಹೆಸರು ಇರಬೇಕಾದ ಆವಶ್ಯಕತೆಯನ್ನು ತೋರಿಸಿಕೊಟ್ಟನು. ಲಿನೆಯಸ್ ಸೂಚಿಸಿದ "ದ್ವಿನಾಮ" ಕ್ರಮವು ಸರಳವೂ ಸುಲಭವೂ ಆಗಿದ್ದುದಲ್ಲದೆ ಸೂಕ್ತವಾಗಿದ್ದುದು ಕಂಡು ಬಂದುದರಿಂದ, ಆ ಕೂಡಲೇ ವಿಶ್ವದ ಎಲ್ಲಾ ವಿಜ್ಞಾನಿಗಳಿಂದಲೂ ಒಪ್ಪಿಗೆ ಪಡೆದು ಪ್ರಸಿದ್ಧಿ ಹೊಂದಿತು. ೧೭೫೩ನೇ ಇಸವಿಯು ಅದಕ್ಕಿಂತ ಹಿಂದಿದ್ದ ಎಷ್ಟೋ ಸಜೀವಿಗಳ ಚಾಲ್ತಿನಾಮಗಳಿಗೆ "ಕೆಂಪು ಅಕ್ಷರದ ವರ್ಷ" (Red-letter year) ವಾಗಿ ಪರಿಣಮಿಸಿತು ಅದೇ ವರ್ಷ ಲಿನೆಯಸ್‌ನ ಸಿಸ್ಟೆಮಾ ನ್ಯಾಚುರೇ ಗ್ರಂಥದ ಹತ್ತನೇ ಮುದ್ರಣ

ಪ್ರಕಟವಾಯಿತು. ಆತ ಈ ಗ್ರಂಥದಲ್ಲಿ ಆಗ ತನ್ನ 'ದ್ವಿನಾಮ' ಪದ್ಧತಿಯ ಪ್ರಕಾರ ಎಲ್ಲಾ ಪ್ರಾಣಿಗಳಿಗೂ ಹೊಸ ನಾಮಕರಣ ಮಾಡಿದ್ದನು.

ಆತನ "ದ್ವಿನಾಮ" ಪದ್ಧತಿ ಎಷ್ಟು ಸರಳವೂ ಸೂಕ್ತವೂ ಆಗಿತ್ತೆಂಬುದನ್ನು ಒಂದು ಉದಾಹರಣೆಯೊಡನೆ ಇಲ್ಲಿ ವಿವರಿಸ ಬಹುದು. ಲಿನೆಯುಸ್ ಎಲ್ಲಾ ಗುಲಾಬಿಯ ಗಿಡಗಳನ್ನು "ರೋಸಾ" (Rosa) ಎಂಬ ಜಾತಿ ಸೂಚಕ ನಾಮದಿಂದ ಕರೆದು ಅವುಗಳಲ್ಲಿದ್ದ ವಿವಿಧ ಒಳಭೇದಗಳ ಗುಲಾಬಿಗಳನ್ನು ಪ್ರತಿಯೊಂದಕ್ಕೂ ಅದರ ಭೇದಸೂಚಕ ನಾಮದಿಂದ ಕರೆದನು. ಫ್ರೆಂಚ್ ಗುಲಾಬಿಯನ್ನು ರೋಸಾ ಗ್ಯಾಲಿಕಾ (Rosa galica) ಎಂದೂ, ಟೀ ನಂತಹ ಪರಿಮಳವುಳ್ಳ ಗುಲಾಬಿ ಯನ್ನು ರೋಸಾ ಓಡೋರೇಟಾ (Rosa Odorata) ಎಂದೂ ನಾಮಕರಣ ಮಾಡಿದನು. ಆತನ 'ದ್ವಿನಾಮ' ಕ್ರಮದನುಸಾರ ಇಂದಿನ ಆಧುನಿಕ ಮಾನವ 'ಹೋಮೋ ಸ್ಯಾಪಿಯನ್ಸ್' (Homo Sapiense) ಎಂದು ಹೆಸರು ಪಡೆದನು.

೧೭೫೫ ರಲ್ಲಿ ಸ್ಪೇನಿನ ದೊರೆ ಅಲ್ಲಿಗೇ ಬಂದು ನೆಲೆಸು ವಂತೆ ಲಿನೆಯುಸ್‌ನನ್ನು ಆಹ್ವಾನಿಸಿದ್ದನು. ದೊರೆ ಇತ್ತಿದ್ದ ಆಕರ್ಷಕ ವೇತನ ಮತ್ತು ಪೂರ್ಣ ಸ್ವಾತಂತ್ರ್ಯ ಲಿನೆಯುಸ್‌ನಿಗೇನೋ ಹಿಡಿಸದೆ, ರಾಜಾಹ್ವಾನವನ್ನು ತಿರಸ್ಕಾರ ಮಾಡಿದನು.

ಆ ವೇಳೆಗೆ ಆತನಿಗೆ ಪುರಸ್ಕಾರ, ಸನ್ಮಾನಪೂರಕ ಗೌರವಗಳು ಒಂದಾದಮೇಲೊಂದು ಹಿಂಬಾಲಿಸಿ ಬರಲು ಆರಂಭವಾದುವು. ಆತನನ್ನು "ನೈಟ್ ಆಫ್ ದಿ ಆರ್ಡರ್ ಆಫ್

ಪೋಲಾರ್ ಸ್ಟಾರ್ " (Knight of the order of polar Star) ಆಗಿ ಗೌರವಿಸಿದಂತಾಯಿತಲ್ಲದೆ, ಕೊನೆಗೆ ಆತನ ಸ್ಥಾನಮಾನಗಳು ಆ ದೇಶದ ದೊಡ್ಡ ಮನುಷ್ಯ (Nobility) ರ ಮಟ್ಟಕ್ಕೂ ಏರಿದುವು. ರಷ್ಯನ್, ಪ್ರಷ್ಯನ್ ಹಾಗೂ ಫ್ರೆಂಚ್ ವಿಜ್ಞಾನ ಸಂಸ್ಥೆಗಳು ಆತನನ್ನು ಗೌರವ ಸದಸ್ಯನನ್ನಾಗಿ ನೇಮಕ ಮಾಡಿಕೊಂಡವು. ಲಂಡನ್‌ನ ರಾಯಲ್ ಸೊಸೈಟಿಯ ಸದಸ್ಯನೂ ಆದನು. ವಿಶ್ವದಾದ್ಯಂತ ಇದ್ದ ಇನ್ನೂ ಎಷ್ಟೋ ಸಂಘ ಸಂಸ್ಥೆಗಳು ಆತನನ್ನು ಸದಸ್ಯನನ್ನಾಗಿ ಮಾಡಿ ತಮ್ಮ ಗೌರವ ಸೂಚಿಸಿದುವು.

ಲಿನೆಯುಸ್ ಕಂಡುಹಿಡಿದ 'ದ್ವಿನಾಮ' ಪದ್ಧತಿಯನ್ನೂ, ಜಗತ್ಪ್ರಸಿದ್ಧಿಯಾದ ಆತನ ಅಸಾಧಾರಣ ಪ್ರತಿಭೆಯನ್ನೂ ಮೆಚ್ಚಿ, ಸ್ವೀಡನ್ ಆತನಿಗೆ ೧೭೬೧ರಲ್ಲಿ ಅತ್ಯುನ್ನತ ಗೌರವದ ಸನದು ಕೊಟ್ಟು, ೧೭೫೭ರ ಹಿಂದಿನಿಂದಲೂ ಆತ " ಕಾರ್ಲ್ ವಾನ್ ಲಿನೇ" (Carl Von Linnae) ಎಂದು ಬಿರುದಾಂಕಿತನಾದನು. ಅಲ್ಲಿಂದ ಮುಂದೆ ಲಿನೆಯುಸ್ ಕಾರ್ಲ್ ವಾನ್ ಲಿನೇ ಎಂಬ ಹೆಸರಿನಿಂದಲೇ ಲೋಕ ಪ್ರಸಿದ್ಧನಾದನು. ಅದರ ಸವಿ ನೆನಪಿನ ಹಾಗೂ ಸಂತೋಷದ ಕುರುಹಾಗಿ ೧೭೬೩ರಲ್ಲಿ ಸ್ವೀಡನ್ನಿನಿಂದ ಯುರೋಪ್‌ಗೆ ಒಂದು ಟೀ ಗಿಡವನ್ನು ಪರಿಚಯ ಮಾಡಲಾಯಿತು.

ವಿಶ್ವದ ನಾನಾ ಕಡೆಗಳಿಂದ ಲಿನೆಯುಸ್‌ಗೆ ಕಂತೆಗಟ್ಟಲೆ ಹೂಗಿಡಗಳನ್ನು ಆತನ ಮಿತ್ರರೂ, ಪ್ರಕೃತಿ ವಿಜ್ಞಾನ ಪ್ರಿಯರೂ ಕಳಿಸುತ್ತಿದ್ದರು. ವಿಶ್ವದ ಯಾವುದೋ ಮೂಲೆಯಲ್ಲಿ ಬೆಳೆದು ಹೂ ಬಿಡುತ್ತಿದ್ದ ಗಿಡಗಳನ್ನು ಆತ ಉಪ್ಪಸಾಲದಲ್ಲಿದ್ದು ಕೊಂಡೇ ನೋಡಿ ವರ್ಗೀಕರಣ ಮಾಡಬೇಕಾಗಿತ್ತು. ಅದೇ

ಸಮಯದಲ್ಲೇ, ತನಗೆ ಬರುತ್ತಿದ್ದ ಸಜೀವಿಗಳ ಸಂಗ್ರಹ ಮಾದರಿಗಳನ್ನು ಆಧರಿಸಿ, ಅಂದು ಪ್ರಪಂಚದಲ್ಲಿದ್ದ ಎಲ್ಲಾ ಪ್ರಾಣಿಗಳು ಮತ್ತು ಸಸ್ಯಗಳ ವಿವರಣೆಯನ್ನೊಳಗೊಂಡ ಒಂದು ಮಹಾನ್ ಗ್ರಂಥವನ್ನು ಬರೆಯಬೇಕೆಂದು ಬಯಸಿದ್ದನು. ಆತನ ಈ ಹೆಬ್ಬಯಕೆ ಆಡಮ್‌ನು ಪ್ರಥಮವಾಗಿ ಈಡನ್ ತೋಟದೊಳಕ್ಕೆ ಪ್ರವೇಶ ಮಾಡಿದಂತಿತ್ತು!

ಬೇಸಿಗೆಯ ರಜಾ ಬಂದಾಗ ಆತ ಸಂಸಾರ ಸಮೇತನಾಗಿ ಉಪ್ಪಸಾಲದ ಹತ್ತಿರವೇ ಇದ್ದ ಹ್ಯಾಮ್ಮರಬಿ (Hammarby) ಯ ಸಣ್ಣ ಎಸ್ಟೇಟ್‌ನ ತನ್ನ ಮನೆಯಲ್ಲಿ ಹೋಗಿ ಬಿಡಾರ ಮಾಡುತ್ತಿದ್ದನು. ಹ್ಯಾಮ್ಮರಬಿಯಲ್ಲೂ ವಿಶ್ವದ ನಾನಾ ಕಡೆಯಿಂದ ಬಂದಿದ್ದ ತನ್ನ ವಿದ್ಯಾರ್ಥಿಗಳಿಗೆ ಸಸ್ಯ ಶಾಸ್ತ್ರವನ್ನು ಬೋಧಿಸುತ್ತಿದ್ದನು. ಅಲ್ಲಿ ನಾರ್ವೇಜಿಯನ್, ಡೇನ್ಸ್, ಜರ್ಮನ್, ಇಂಗ್ಲೀಷ್, ರಷ್ಯನ್, ಡಚ್ ವಿದ್ಯಾರ್ಥಿಗಳಿದ್ದರಲ್ಲದೆ ಒಬ್ಬ ಅಮೇರಿಕೆಯ ವಿದ್ಯಾರ್ಥಿಯೂ ವ್ಯಾಸಂಗ ಮಾಡುತ್ತಿದ್ದನು. ಇವರಲ್ಲನೇಕರು ಲಿನೆಯಸ್‌ನಿಂದ ವಿದ್ಯಾರ್ಜನೆ ಮಾಡಿ ಅನಂತರ ತಮ್ಮ ದೇಶಗಳಲ್ಲಿ ಖ್ಯಾತ ಸಸ್ಯ ವಿಜ್ಞಾನಿಗಳಾದ ನಿದರ್ಶನಗಳಿವೆ. ಅನೇಕ ಬಡ ವಿದ್ಯಾರ್ಥಿಗಳಿಗೆ ಲಿನೆಯಸ್ ಹ್ಯಾಮ್ಮರಬಿಯಲ್ಲಿದ್ದಾಗ ತನ್ನ ಸ್ವಂತ ಖರ್ಚಿನಲ್ಲೇ ವಿದ್ಯಾದಾನ ಮಾಡುತ್ತಿದ್ದನಲ್ಲದೆ, ಕೆಲವರನ್ನು ತನ್ನ ಮನೆಯಲ್ಲೇ ಇಟ್ಟುಕೊಂಡು ಅಶನ–ವಸತಿಗಳನ್ನು ನೀಡಿದ್ದನು. ಈಗಲೂ ಹ್ಯಾಮ್ಮರಬಿಯ ಆ ಮನೆ ಪ್ರಶಾಂತ ವಾತಾವರಣದಲ್ಲಿದ್ದು ಹಿಂದಿನ ಆ ಮಧುರ ಮಂದ ಸ್ಮಿತವನ್ನು ಬೀರುತ್ತಿದೆ. ಆತ ವಾಸಿಸುತ್ತಿದ್ದ ಮರದ ದಿಮ್ಮಿಗಳಿಂದ ನಿರ್ಮಿತವಾಗಿದ್ದ ಕೆಂಪು ಬಣ್ಣದ ಮನೆಯ ಹಿಂದೆ

ಲಿನೆಯಸ್‌ನೇ ಉಪ್ಪಸಾಲಕ್ಕಾದ ಅಗ್ನಿ ನಷ್ಟಕ್ಕೆ ಹೆದರಿ, ತಾನೇ ಒಂದು ಕಲ್ಲಿನ ಕಟ್ಟಡವನ್ನು ಕಟ್ಟಿಸಿ ಅಲ್ಲಿ ಬಹಳ ಪ್ರಶಸ್ತ್ಯ ವಾದ ಅನೇಕ ಸಸ್ಯಗಳ ಸಂಗ್ರಹವನ್ನೇ ಶೇಖರಿಸಿದ್ದನು. ಈಗಲೂ ಆ ಕಲ್ಲು ಕಟ್ಟಡ ಲಿನೆಯಸ್‌ನನ್ನೇ ಮೂರ್ತೀಭವಿಸಿ ನಿಂತಿದೆ.

ವರ್ಗೀಕರಣ ಶಾಸ್ತ್ರ (Taxonomy) ಚರಿತ್ರೆಯಲ್ಲಿ ಲಿನೆಯಸ್‌ನ ಹೆಸರು ಅಮರವಾಗಿರಲು, ಆತ ಕಂಡುಹಿಡಿದ ವರ್ಗೀಕರಣ ಪದ್ಧತಿ, 'ದ್ವಿನಾಮ' ಕ್ರಮ, ಪ್ರಕಟಿಸಿದ ಗ್ರಂಥಗಳು, ಕೈಗೊಂಡ ವಿಶ್ವ ಪ್ರವಾಸಗಳು, ಆತನ ಸಾರ್ಥಕ ಶ್ರಮಗಳೇ ಅಲ್ಲದೆ ಆತ ತನ್ನ ವಿದ್ಯಾರ್ಥಿಗಳಲ್ಲಿ ಸಸ್ಯ ಶಾಸ್ತ್ರಾಧ್ಯ ಯನಕ್ಕೆ ಆಸಕ್ತಿ ಹುಟ್ಟುವಂತೆ ಮಾಡಿ ಅದು ಪರಿಣಾಮಕಾರಿ ಯಾಗಿ ಫಲಕೊಡಲು ಸ್ಫೂರ್ತಿಯಿತ್ತುದೂ. ಕಾರಣ ಹೊರ ದೇಶಗಳಿಂದ ಬಂದಿದ್ದ ವಿದ್ಯಾರ್ಥಿಗಳು ಸಸ್ಯ ವಿಜ್ಞಾನಿ ಗಳಾದರಲ್ಲದೆ, ತಮ್ಮ ಗುರು ತಿಳಿದಿದ್ದುದಕ್ಕಿಂತಲೂ ಹೆಚ್ಚಿನ ಸಂಖ್ಯೆಯ ಸಜೀವಿಗಳನ್ನು ಪತ್ತೆ ಹಚ್ಚಿ, ಗುರುತಿಸಿ ವರ್ಗೀಕರಣ ಮಾಡಿ ಪಟ್ಟಿ ಮಾಡಿದರು. ಇವಕ್ಕೆಲ್ಲಾ ಮಿಗಿಲಾಗಿ ಸಸ್ಯ ವಿಜ್ಞಾನದ ಬೆಳವಣಿಗೆಗೂ ಲಿನೆಯಸ್‌ನೇ ಪ್ರೇರಕ ಶಕ್ತಿ ಯಾದನು.

೧೭೪೬ರಲ್ಲಿ "ಫಾನಾ ಸೂಯೆಸಿಕಾ" (Fauna Suecica) ಗ್ರಂಥವೂ ೧೭೪೭ ರಲ್ಲಿ "ವಾಸ್ಟಗೋಟಾ ರೀಸಾ" (Wastgota Resa) ೧೭೫೧ರಲ್ಲಿ "ಸ್ಕಾನಸ್ಕ ರೇಸಾ" (Skanaska Resa) ೧೭೪೮ರಲ್ಲಿ "ಉಪ್ಪಸ ಲೈನ್‌ಸಿಸ್" (Uppasaliensis) ೧೭೫೧ ರಲ್ಲಿ "ಫಿಲೋಸಫಿಯಾ ಬಟಾನಿಕಾ" (Philosophia Botanica) ೧೭೫೩ರಲ್ಲಿ "ಸ್ಪೀಸೀಸ್ ಪ್ಲಾಂಟಾರಂ" (Specis Plantarum)

ಎಂಬ ಗ್ರಂಥಗಳೂ ಹೊರಬಿದ್ದುವು. ಬರ್ಲಿನ್ ವಿಶ್ವವಿದ್ಯಾನಿಲಯದ ಪ್ರಕೃತಿ ವಿಜ್ಞಾನದ ಪ್ರಾಧ್ಯಾಪಕನಾಗಿದ್ದ ಕಾರ್ಲ್ ಲುಡ್‌ವಿಗ್ ವಿಲ್ಡೆನೋವ್ (೧೭೬೫–೧೮೧೨) ಲಿನೆಯಸ್‌ನ "ಸ್ಪೀಸೀಸ್ ಪ್ಲಾಂಟಾರಂ" ಗ್ರಂಥದ ನಾಲ್ಕನೆ ಆವೃತ್ತಿಯನ್ನು ಪರಿಷ್ಕರಿಸಿ, ವಿಸ್ತರಿಸಿ, ಸಂಪಾದಿಸಿ ೯ ಬೃಹತ್ ಸಂಪುಟಗಳಲ್ಲಿ ಪ್ರಕಟಿಸಿದನು. ಅದೇ ಲಿನೆಯಸ್‌ನ ಕೊನೆಯ ಗ್ರಂಥವಾಯಿತಲ್ಲದೆ, ಅನೇಕ ವಿಜ್ಞಾನಿಗಳಿಂದಲೂ ಮೆಚ್ಚಿಗೆ ಪಡೆಯಿತು.

೧೭೬೦ರಲ್ಲಿ ಹಾಲೆಂಡ್ ಮತ್ತು ಜರ್ಮನಿಗಳಲ್ಲೂ ಆತನ ವರ್ಗೀಕರಣ ಪದ್ಧತಿ ಬಳಕೆಯಲ್ಲಿತ್ತು. ಇಂಗ್ಲೆಂಡ್‌ನಲ್ಲಿ ಡಿಲ್ಲೇನಿಯಸ್‌ನಿಂದ ಪ್ರತಿಪಾದಿಸಲ್ಪಟ್ಟಿದ್ದರೂ ಅಷ್ಟು ಬಳಕೆಯಲ್ಲಿರಲಿಲ್ಲ. ಲಿನೆಯಸ್ ಗತಿಸಿದ ಒಂದು ಶತಮಾನದ ಮೇಲೂ ಆತನ ವರ್ಗೀಕರಣ ಪದ್ಧತಿ ಅನೇಕ ಸಸ್ಯವಿದ್ಯಾರ್ಜನೆಯ ಕೇಂದ್ರಗಳಲ್ಲಿ ವಿಶ್ವದಾದ್ಯಂತ ಬಳಕೆಯಲ್ಲಿತ್ತು.

೧೮೪೦ರ ವರೆಗೂ ಲಿನೆಯಸ್ ಪದ್ಧತಿಯು ಅಮೆರಿಕೆಯಲ್ಲಿ ಬಳಕೆಯಲ್ಲಿತ್ತೆಂದು ತಿಳಿದು ಬಂದಿದೆ. ಆದರೆ ಅನಂತರ ಬಂದ ನಟ್ಟಾಲ್, ಟೋರಿ, ಗ್ರೇ ಮುಂತಾದ ವಿಜ್ಞಾನಿಗಳೇ ಆತನ ಪದ್ಧತಿಯನ್ನು ಕೈಬಿಡಲು ಬಹಳ ಮಟ್ಟಿಗೆ ಕಾರಣರಾದರು. ಆತನ 'ಸ್ಪೀಸೀಸ್ ಪ್ಲಾಂಟಾರಂ' ಗ್ರಂಥದ ೧ನೇ ಆವೃತ್ತಿ ೧೭೬೮ರಲ್ಲಿ ಪ್ರಕಟವಾಯಿತು. ಅದರಲ್ಲಿ ಸುಮಾರು ೭೩೦೦ ಜಾತಿಯ ಸಸ್ಯಗಳಿಗೆ 'ದ್ವಿನಾಮ' ಪದ್ಧತಿಯಂತೆ ನಾಮಕರಣ ಮಾಡಿದ್ದನಲ್ಲದೆ, ಅದು ಸುಮಾರು ೨೫೦೦ ಪುಟಗಳ ಬೃಹತ್ ಸಂಚಿಕೆಯಾಗಿದ್ದು ಇಂದಿಗೂ ಬಹುಸಂಖ್ಯೆಯ ಸಸ್ಯಗಳಿಗೆ ಅಂದಿನ ಲಿನೆಯಸ್ ನಾಮಕರಣವನ್ನೇ ಉಳಿಸಿಕೊಂಡು ಬಂದಿವೆ. ಆತನ 'ಸಿಸ್ಟೆಮಾ ನ್ಯಾಚುರೇ' ೧೭೩೫

ರಲ್ಲಿ ಪ್ರಥಮವಾಗಿ ಪ್ರಕಟವಾದಂದಿನಿಂದ ಅನೇಕ ತಿದ್ದುಪಡಿಗಳೊಡನೆ ವಿಸ್ತಾರ ಹೊಂದಿ ೧೭೫೮ರಲ್ಲಿ ಅದರ ೧೦ನೇ ಆವೃತ್ತಿ ಹೊರಬಿದ್ದು ಅನೇಕ ಜೀವಶಾಸ್ತ್ರಜ್ಞರ ಮೆಚ್ಚುಗೆ ಪಡೆದು ತುಂಬಾ ಜನಪ್ರಿಯವಾಯಿತು.

## ಕೊನೆಯ ದಿನಗಳು

ಲಿನೆಯಸ್ ಪ್ರಕೃತಿ ಪ್ರೇಮಿ ಉಪ್ಪಸಾಲ ಬಿಟ್ಟು ಹ್ಯಾಮ್ಮರಬಿಯಲ್ಲಿ ತಂಗಿದ್ದಾಗಲೆಲ್ಲ ಆ ಇಳಿವಯಸ್ಸಿನಲ್ಲ್ಯೂ ಸುತ್ತಮುತ್ತಲಿದ್ದ ಅರಣ್ಯ ಪ್ರದೇಶಗಳಿಗೆ ಆಗಾಗ್ಯೆ ತಪ್ಪದೆ ಭೇಟಿಯಿತ್ತು ಸೃಷ್ಟಿ ಸೌಂದರ್ಯದ ಸವಿಯುಂಡು ಬರುತ್ತಿದ್ದನು. ಆತನಿಗೆ ವಯಸ್ಸಾದಂತೆಲ್ಲಾ ಜ್ಞಾನದಾಹವೂ ಹೆಚ್ಚುತ್ತಲೇ ಇತ್ತು. ಆತ ಮಾನವ ಪ್ರೇಮಿ; ಎಳೆಯ ಮಕ್ಕಳೆಂದರೆ ಪಂಚಪ್ರಾಣ. ವೃದ್ಧಾಪ್ಯದಲ್ಲೂ ತನ್ನ ಪುಟ್ಟ ಮುದ್ದು ಕಂದನನ್ನು ತೊಡೆಯಮೇಲೆ ಕುಳ್ಳಿರಿಸಿಕೊಂಡೇ ಆತ ತನ್ನ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುತ್ತಿದ್ದನು.

ಲಿನೆಯಸ್ ಪ್ರವಾಸ ಮುಗಿಸಿಕೊಂಡು ತನ್ನ ವಿದ್ಯಾರ್ಥಿ ವೃಂದದೊಂದಿಗೆ ಉಪ್ಪಸಾಲದ ರಾಜಬೀದಿಗಳಲ್ಲಿ ಬರುತ್ತಿದ್ದನೆಂದರೆ, ಆ ನೋಟ ವೀಕ್ಷಕರ ಕಣ್ಣಿಗೊಂದು ಹಬ್ಬ! ಲಿನೆಯಸ್‌ನ ವಿದ್ಯಾರ್ಥಿಗಳು ಫ್ರೆಂಚ್ ತುತ್ತೂರಿಗಳನ್ನು ಊದುತ್ತಾ — "ಸೆಯಾನ್ಸಿಯಾ ವಿವಟ್ (Sciencea Vivat)"–"ವಿಜ್ಞಾನ ಚಿರಸ್ಥಾಯಿಯಾಗಿರಲಿ" "ಲಿನೆಯಸ್ ಅಮರನಾಗಲಿ" (Vivat Linneus) ಎಂದು ವಿಜಯ ಘೋಷಗಳನ್ನು ಕೂಗುತ್ತಾ ಬರುತ್ತಿದ್ದರೆಂದರೆ ವಿಜ್ಞಾನ ಪ್ರಿಯರಿಗೆ ಆತ್ಮಾನಂದವುಂಟಾಗುತ್ತಿತ್ತು.

೧೭೭೦ರಲ್ಲಿ ಮೊದಲ ಬಾರಿಗೆ ಲಿನೆಯಸ್‌ನ ಆರೋಗ,

ಕೆಟ್ಟಿತು. ಅನಂತರ ನಾಲ್ಕು ವರ್ಷ ಹೇಗೋ ಚೇತರಿಸಿಕೊಂಡಿದ್ದನು ಆದರೆ ಆತ ಆರೋಗ್ಯವಾಗಿದ್ದು ವಿಜ್ಞಾನದೇಳಿಗೆಯಾಗುವುದನ್ನು ದೈವ ಕಂಡು ಸಹಿಸಲಾರದೆಯೋ ಏನೋ ೧೭೭೪ರಲ್ಲಿ ರುದ್ರವಾಯು (Apoplectic Attack) ಆತನನ್ನು ಬಡಿಯಿತು. ಈ ಘಾತವನ್ನೂ ಆತ ಸುಧಾರಿಸಿಕೊಂಡಿದ್ದನು. ಮತ್ತೆ ೧೭೭೬ರಲ್ಲಿ ಎರಡನೇ ಬಾರಿಗೆ ಲಿನೆಯುಸ್ ರುದ್ರವಾಯುವಿಗೆ ತುತ್ತಾದನು. "ಲಿನೆಯುಸ್ ಬರೆಯಲಾರ, ಓದಲಾರ, ಆತನ ದೇಹ ತತ್ತರಿಸುತ್ತದೆ, ಅಲ್ಪಸ್ವಲ್ಪ ಮಾತಾಡುವುದೇ ಕಷ್ಟ" ಎಂದು ತನ್ನ ನಡುಗುತ್ತಿದ್ದ ಕೈಯಿಂದಲೇ ಈ ನಾಲ್ಕಾರು ಶಬ್ದಗಳನ್ನು ಬರೆದಿರುವುದನ್ನು ಆತನ ಚರಿತ್ರೆಯಲ್ಲಿ ಕಾಣಬಹುದು. ಎರಡುವರ್ಷ ಸರಳಿ ೧೭೭೮ರ ಜನವರಿ ೧೦ನೇ ದಿನಾಂಕವಂದು ಲಿನೆಯುಸ್ ಉಪ್ಪಸಾಲದಲ್ಲಿ ಅಸು ನೀಗಿದನು. ಕೊನೆಯ ಹೋರಾಟದಲ್ಲಿ ವಿಧಿಯೇ ಜಯಗಳಿಸಿತು. ಚಳಿಗಾಲದ ಒಂದು ಸಂಜೆ, ಆತನ ವಿದ್ಯಾರ್ಥಿಗಳು ಧಗಧಗಿಸಿ ಉರಿಯುವ ಪಂಜಿನ ಮೆರವಣಿಗೆಯಲ್ಲಿ ಆತನ ಪಾರ್ಥಿವ ಶರೀರವನ್ನು, ಉಪ್ಪಸಾಲದ ಚರ್ಚ್‌ನ ದ್ವಾರದಲ್ಲೇ ಇದ್ದ ರುದ್ರಭೂಮಿಯಲ್ಲಿ ಸಮಾಧಿ ಮಾಡಿದರು. ಮೂರನೆ ಗುಸ್ಟೋವ್ ದೊರೆ (King Gustav III) ಪಾರ್ಲಿಮೆಂಟಿನ ಪ್ರಾರಂಭಾಧಿವೇಶನವನ್ನು ಉದ್ದೇಶಿಸಿ, ಲಿನೆಯುಸ್‌ಗೆ ಶ್ರದ್ಧಾಂಜಲಿಯನ್ನರ್ಪಿಸುತ್ತಾ, "ಜಗದ್ವಿಖ್ಯಾತನಾಗಿದ್ದ, ತಾಯ್ನಾಡಿನ ಘನತೆ ಗೌರವಗಳ ಹೆಗ್ಗಳಿಕೆಯಾಗಿದ್ದ, ಸ್ವೀಡನ್ನಿನ ಒಬ್ಬ ಶ್ರೇಷ್ಠ ಸತ್ಪ್ರಜೆಯನ್ನು ನಾನಿಂದು ಕಳೆದುಕೊಂಡಿದ್ದೇನೆ ಎಂದು ಕಣ್ಣೀರ್ಗರೆದನು.

ಲಿನೆಯುಸ್ ಗತಿಸಿದ ನಂತರ ಆತ ಸಂಗ್ರಹಿಸಿದ

ಅಸಂಖ್ಯಾತ ಸಜೀವಿ ಮಾದರಿಗಳು ಮತ್ತು ಗ್ರಂಥಗಳು ಆತನ ಹೆಂಡತಿ ಮತ್ತು ಮಕ್ಕಳ ವಶಕ್ಕೆ ಬಂದುವು. ಆತ ಕಾಲವಾದ ಐದು ವರ್ಷಗಳ ವರೆಗೂ ಆತ ಬಿಟ್ಟು ಹೋಗಿದ್ದ ಸಂಗ್ರಹದತ್ತ ಯಾವ ವಿಜ್ಞಾನಿಯ ಅಥವಾ ಸ್ವೀಡನ್ ಸರಕಾರದ ಗಮನ ಬಾರದಿದ್ದುದು ಶೋಚನೀಯವಾದುದು. ಸ್ವಲ್ಪ ಕಾಲಾನಂತರ ಲಿನೆಯಸ್‌ನ ಹೆಂಡತಿ ಮಕ್ಕಳು ಅವನ್ನು ಹೆಚ್ಚು ಬೆಲೆ ತೆತ್ತವರಿಗೆ ಹೇಗಾದರೂ ಮಾರಿ ಹಣ ಗಳಿಸಬೇಕೆಂಬ ಮನಸ್ಸಾಯಿತು. ಆ ಬಗ್ಗೆ ದೀರ್ಘ ವ್ಯವಹಾರ ನಡೆದಮೇಲೆ ಬ್ಯಾಂಕ್ಸ್‌ನ ಸಲಹೆಯ ಮೇರೆಗೆ ಲಿನೆಯಸ್‌ನ ಪ್ರಾಣಿ-ಸಸ್ಯ ಸಂಗ್ರಹ ಮತ್ತು ಆತನ ಗ್ರಂಥಗಳನ್ನು ಮಾರಿಬಿಡಲು ತೀರ್ಮಾನಿಸಲಾಯಿತು. ಅವುಗಳನ್ನೆಲ್ಲಾ ಕೊಂಡುಕೊಂಡ ಅದೃಷ್ಟವಂತನೆಂದರೆ ಇಂಗ್ಲೆಂಡಿನ ತರುಣ ವೈದ್ಯವಿದ್ಯಾರ್ಥಿ ಹಾಗೂ ಶ್ರೀಮಂತ ಜೇಮ್ಸ್ ಎಡ್ವರ್ಡ್ ಸ್ಮಿತ್ (James Edward Smith) ಅವುಗಳೆಲ್ಲದರ ಒಟ್ಟು ಬೆಲೆ ೧೦೦೦ ಗಿನಿಯಾಗಳು. ಆ ಎಲ್ಲಾ ಸಂಗ್ರಹವನ್ನೂ ೨೬ ದೊಡ್ಡ ಪೆಟ್ಟಿಗೆಗಳಲ್ಲಿ ತುಂಬಿ ೧೭೮೪ರ ಸೆಪ್ಟೆಂಬರ್‌ನಲ್ಲಿ ಒಂದು ಹಡಗಿನಲ್ಲಿ ತುಂಬಿಕೊಂಡು ಸ್ಟಾಕ್‌ಹೋಂನಿಂದ ಇಂಗ್ಲೆಂಡಿಗೆ ಸಾಗಿಸಲಾಯಿತು. ಆ ಅಪೂರ್ವ ಸಂಗ್ರಹವನ್ನು ಹೇಗಾದರೂ ಮರಳಿ ತನ್ನ ದೇಶಕ್ಕೇ ತರಬೇಕೆಂದು ಸ್ವೀಡನ್ ದೊರೆ ಒಂದು ಯುದ್ಧದ ಹಡಗನ್ನೇ ಕಳಿಸಿದ್ದನಂತೆ, ಅದು ಆ ಕಾರ್ಯದಲ್ಲಿ ವಿಫಲ ಹೊಂದಿ ಮರಳಿ ಸ್ವೀಡನ್ನಿಗೆ ಬಂದಿತಂತೆ. ಕೊನೆಗೂ ಲಿನೆಯಸ್‌ನ ಸಂಗ್ರಹ ಸ್ವೀಡನ್ ಕೈಬಿಟ್ಟಿತು. ದೊರೆ ಯುದ್ಧದ ಹಡಗನ್ನು ಕಳಿಸಿದ್ದ ಬಗ್ಗೆ ಇತಿಹಾಸದ ದಾಖಲೆಗಳಿಲ್ಲ. ಆದರೂ ಅದೊಂದು ವದಂತಿಯಾಗಿ ಪ್ರಚಲಿತ

ವಾಗಿದೆ. ಆಮೇಲೆ ಲಂಡನ್ ನಗರದಲ್ಲಿರುವ "ಲಿನೆಯನ್ ಸೊಸೈಟಿ" (Linnean Society) ಅದನ್ನು ಸ್ಮಿತ್‌ನಿಂದ ೩೦೦೦ಗಿನಿಯಾಗಳಿಗೆ ಕೊಂಡುಕೊಂಡಿತು. ಅನಂತರ ಎಡ್‌ವರ್ಡ್ ಸ್ಮಿತ್‌ನೇ ಆ ಜಗದ್ವಿಖ್ಯಾತ ಜೀವ ವಿಜ್ಞಾನ ಸಂಘದ ಪ್ರಥಮ ಅಧ್ಯಕ್ಷನಾದನು. ಆ ಸಂಘ ಅಸ್ತಿತ್ವಕ್ಕೆ ಬರಲು ಸ್ಮಿತ್‌ನ ಉತ್ಸಾಹ ಮತ್ತು ಉತ್ತೇಜನಗಳೇ ಕಾರಣವೆನ್ನಬಹುದು. ಲಿನೆಯಸ್ ಶೇಖರಿಸಿದ್ದ ಸುಮಾರು ೧೫,೦೦೦ ಸಸ್ಯಗಳು, ಇನ್ನೂ ಇತರ (ಕೀಟಗಳು, ಕಪ್ಪೆಚಿಪ್ಪುಗಳು, ಮೀನುಗಳು) ಶೇಖರಣೆಗಳು ಆತನ ೩೦೦೦ ಕಾಗದ ಪತ್ರಗಳೂ ೧೮೨೮ರಲ್ಲಿ ಲಿನೆಯನ್ ಸಂಘದ ಅಧೀನವಾದುವು. ಆತನ ಅಗಾಧ ಗ್ರಂಥ ಭಂಡಾರದ ಒಡೆತನವೂ ಆ ಸಂಘದ್ದಾಯಿತು. ಆ ಎಲ್ಲಾ ಅಪೂರ್ವ ಸಂಗ್ರಹಣೆಯನ್ನು ಲಂಡನ್ ನಗರದಲ್ಲಿರುವ ಬರ್ಲಿಂಗ್‌ಟನ್ ಹೌಸ್‌ನಲ್ಲಿ ಶೇಖರಿಸಿಡಲಾಗಿದ್ದು, ಸಂಶೋಧನಾಪೇಕ್ಷಿಗಳಿಗೆ ನೆರವಾಗಿದೆ. ೧೮೨೮ರಲ್ಲೇ ಸ್ಮಿತ್ ಗತಿಸಿದನು. ಆತ ಗತಿಸಿದನಂತರ, ಸಂಘದ ಜೀರ್ಣೋದ್ಧಾರಕ್ಕಾಗಿ ಚಂದಾ ಎತ್ತಲಾಯಿತು ಇಂದು ಈ ಸಂಘಕ್ಕೆ ವಿಶ್ವದ ಅನೇಕ ವೈಜ್ಞಾನಿಕ ಸಂಸ್ಥೆಗಳು ನೆರವಾಗಿ ಅದರ ಸರ್ವತೋಮುಖ ಏಳಿಗೆ ನಡೆಯಲು ಕಾರಣವಾಗಿವೆ.

ಲಿನೆಯಸ್ ಬರೆದು ಪ್ರಕಟಿಸಿದ ಸುಮಾರು ೧೮೦ಕ್ಕೂ ಮಿಗಿಲಾದ ಗ್ರಂಥಗಳು, ಲೇಖನಗಳು ಮತ್ತು ಸಂಶೋಧನಾ ವರದಿಗಳನ್ನು ಆರ್. ಪುಲ್ಟೇನೀಸ್ ಎಂಬಾತ ಪರಿಶೀಲಿಸಿ, ಅವುಗಳೆಲ್ಲದರ ಒಂದು ತಪಸೀಲನ್ನು ಬರೆದನು. ಪುಲ್ಟೇನೀಸ್ ಬರೆದ "ಲಿನೆಯಸ್ ಕೃತಿ-ಬರಹಗಳ ಸಾಮಾನ್ಯ ವೀಕ್ಷಣೆ" ಎಂಬ ಗ್ರಂಥ ೧೭೮೧ರಲ್ಲಿ ಪ್ರಕಟವಾಯಿತು. ಅನಂತರ ಪುಲ್ಟೇನೀಸ್‌ನೇ

ಬರೆದ ಆತನ ಸ್ವಂತ ಕೃತಿಯಾದ "ಎಪಿಸ್ಟೊಲೇ ಇಸರ್ಸಿಯೇ" (Epistole Inertiae) ೧೮೩೦ ರಲ್ಲಿ ಗ್ರೋನಿಸ್‌ಗಿನ್‌ನಲ್ಲಿ ಪ್ರಕಟವಾಯಿತು.

## ಪರಿಸಮಾಪ್ತಿ

ಲಿನೆಯಸ್ ಒಬ್ಬ ಮಹಾ ಪ್ರಕೃತಿ ವಿಜ್ಞಾನಿಯಾಗಿದ್ದನು. ಆತನಲ್ಲಿದ್ದ ಶ್ರದ್ಧೆ, ನಿಷ್ಠೆ, ಕ್ರಮಬದ್ಧವಾದ ಅಧ್ಯಯನಾ ರೀತಿ. ಅಪೂರ್ವ ಪಿಕ್ಷಣಾಶಕ್ತಿ, ಪ್ರಕೃತಿಯಿಂದಾಗಿ ನೇರವಾಗಿ ಜ್ಞಾನ ಸಂಪಾದಿಸುವ ಇಚ್ಛೆ ಇವೇ ಆತ ಒಬ್ಬ ಖ್ಯಾತ ವಿಜ್ಞಾನಿಯಾಗಲು ಕಾರಣವೆನ್ನಬಹುದು. ಲಿನೆಯಸ್ ಒಂದು ನಿರ್ದಿಷ್ಟವಾದ ವೈಜ್ಞಾನಿಕ ಪಾರಿಭಾಷಿಕ ಶಬ್ದ ಬೆಳವಣಿಗೆಗೆ ಹಾದಿ ಮಾಡಿ ಕೊಟ್ಟನು. ಸಸ್ಯದ ಅನೇಕ ಭಾಗಗಳಿಗೆ ಆತನೇ ಮೊದಲಿಗೆ ನಾಮಕರಣ ಮಾಡಿದನು. ಆತ ಗಿಡಗಳಿಗೆ ಅವುಗಳ ಕುಲ ಅಥವಾ ಜಾತಿಯ (Genus) ಮತ್ತು ಒಳ ಭೇದಗಳ (Species) ಗಳಿಗೆ ಪಾರಿಭಾಷಿಕ ಹೆಸರುಗಳನ್ನಿಟ್ಟು, 'ದ್ವಿನಾಮ' ಪದ್ಧತಿಯನ್ನು ಜಾರಿಗೆ ತಂದನು. ಇದರಿಂದಾಗಿ ಹೊಸ ಸಸ್ಯಗಳನ್ನು ಗುರುತಿಸಿ, ಅವುಗಳನ್ನು ಕ್ರಮ ಬದ್ಧವಾಗಿ ಸಂಬಂಧ ಪಟ್ಟ ಕುಟುಂಬಕ್ಕೆ (Family) ಸೇರಿಸಿ ವರ್ಗೀಕರಣ ಮಾಡಿ ಅಧ್ಯಯನ ಮಾಡಲು ಸಹಾಯವಾಯಿತು. ಆತ ಕಂಡುಹಿಡಿದ "ಲೈಂಗಿಕ ಪದ್ಧತಿ" (Sexual System) ಯು ವರ್ಗೀಕರಣ ಶಾಸ್ತ್ರಕ್ಕೆ ಮಾರ್ಗದರ್ಶಿಯಾಯಿತು. ಆಗ ತಾನೆ ಸಸ್ಯ ವಿಜ್ಞಾನ ಅರಿಯಲು ಬಂದ ವಿದ್ಯಾರ್ಥಿಗಳಿಗೆ ಇದು ಮಾರ್ಗದರ್ಶಿಯಾಯಿತು. ಮೇಲಾಗಿ ಸಾಮಾನ್ಯರೂ ಸಸ್ಯಗಳನ್ನು ನೋಡಿ, ಅಪೂರ್ವವಾದುವುಗಳನ್ನು ಶೇಖರಣೆ ಮಾಡುವುದೂ ಒಂದು ಹವ್ಯಾಸವಾಗುವಂತಾಯಿತು.

ಲಿನೆಯಸ್‌ನನ್ನು ಒಬ್ಬ ಸ್ವೀಡಿಷ್ ಸಾಹಿತಿಯಾಗಿ, ಆತನ ಕೃತಿಗಳನ್ನು ಸಾಹಿತ್ಯಾಭಿಲಾಷೆಯಿಂದ ಓದಿ ಸ್ಫೂರ್ತಿ ಪಡೆಯುತ್ತಿರುವ ಸಾಹಿತ್ಯಾಭಿಮಾನಿಗಳೂ ಇದ್ದಾರೆ ಆತನ ನಿರರ್ಗಳವಾದ ಹೊಸ ಫ್ರೆಂಚ್ ಧಾಟಿಯನ್ನನುಸರಿಸಿ, ಸರಳವಾಗಿ, ನೇರವಾಗಿ, ಸ್ಪಷ್ಟವಾಗಿ ಬರೆದ ಕೃತಿಗಳು ನಿಜಕ್ಕೂ ಜೀವಂತ ಸಾಹಿತ್ಯದ ಪ್ರತೀಕವಾಗಿವೆ. ಸ್ವೀಡನ್ ಪ್ರವಾಸ ಕುರಿತು ಆತ ಬರೆದಿರುವ ವರದಿಯಲ್ಲಿ ಪ್ರಕೃತಿಯ ನೈಜ ಚಿತ್ರವನ್ನು ನಾವು ಕಾಣಬಹುದಲ್ಲದೆ ಆತ ಎಷ್ಟು ಪ್ರಕೃತಿ ಪ್ರೇಮಿಯಾಗಿದ್ದನೆಂಬುದು ತಿಳಿಯುತ್ತದೆ. ಲಿನೆಯಸ್ ಮತ್ತು ಆತನ ಕೃತಿಗಳು ಸ್ವೀಡಿಷ್ ತರುಣ ಸಾಹಸೀ ವಿಜ್ಞಾನಿಗಳಿಗೂ ಬರಹಗಾರರಿಗೂ ಇಂದಿಗೂ ಸ್ಫೂರ್ತಿದಾಯಕವಾಗಿವೆ.

ಲಿನೆಯಸ್ ತನ್ನ ಆಪ್ತ ಮಿತ್ರ ರಾಜವೈದ್ಯನಾಗಿದ್ದ ಅಬ್ರಾಹಂ ಬಾಕ್‌ನಿಗೆ (Abraham Bauk) ಸುಮಾರು ೫೦೦-೬೦೦ ಪತ್ರಗಳನ್ನು ಬರೆದಿದ್ದಾನೆ. ಆತನ ಪತ್ರಗಳಲ್ಲಿ ಮಾನವೀಯತೆಯ ಮಹಾಪೂರವನ್ನು ಕಾಣಬಹುದು. ಜೊತೆಗೆ ಆತನ ಹಾಸ್ಯಮನೋವೃತ್ತಿ, ದಯಾಪರತೆ, ಸ್ನೇಹ ಪರತೆ. ಜನ ಆತನನ್ನು ಕಟುವಾಗಿ ಟೀಕಿಸಿದ್ದಾಗ್ಯೂ ಧೃತಿ ಗೆಡದೆ ಇದ್ದ ತಾಳ್ಮೆ, ಕಾರ್ಯತತ್ಪರತೆ ಇನ್ನೂ ಮುಂತಾದ ಅನೇಕ ಗುಣಗಳನ್ನು ಕಾಣಬಹುದು. ಆದಾಗ್ಯೂ ಲಿನೆಯಸ್ ಸ್ವಲ್ಪ ಸಂಕೀರ್ಣ ಸ್ವಭಾವ (Complex) ದ ವ್ಯಕ್ತಿ ಯಾಗಿದ್ದನು.

ಲಿನೆಯಸ್ ೪೦ ವರ್ಷಗಳ ಸಫಲವಾದ ತುಂಬುಜೀವನ ನಡೆಸಿ, ವಿದ್ಯಾರ್ಥಿಗಳೊಂದಿಗೆ ವಿದ್ಯಾರ್ಥಿಯಾಗಿಯೇ, ಪ್ರಕೃತಿಯ ಅನ್ವೇಷಕನಾಗಿ, ಸೃಷ್ಟಿ ಸೌಂದರ್ಯದ ಸವಿ

ಯುಂಡು, ಜೀವ ವಿಜ್ಞಾನವನ್ನು ಜೀವಂತಗೊಳಿಸಿ, ಜ್ಞಾನ ದೇಗುಲದ ದೀವಿಗೆಯಾಗಿ, ಪ್ರಕೃತಿ ಸೃಷ್ಟಿಯ ಚಿತ್ರವನ್ನು ನಮಗೆ ಚಿರಂತನವಾಗಿ ನೀಡಿ, ಅಪ್ರತಿಮ ಮೇಧಾವಿಗಳಲ್ಲೊಬ್ಬನಾಗಿ, ಅಮರನಾಗಿದ್ದಾನೆ.

---

ಲಿನೆಯಸ್ ವರ್ಗೀಕರಣದ ಪದ್ಧತಿಗನುಸಾರವಾಗಿ, ಸಸ್ಯಗಳನ್ನು ವರ್ಗೀಕರಣ ಮಾಡಿ, ಕೆಲವು ಉದಾಹರಣೆಗಳೊಡನೆ ಈ ಕೆಳಗೆ ವಿಂಗಡಿಸಲಾಗಿದೆ.

## ಲಿನೆಯಸ್ ಪದ್ಧತಿಯ ವರ್ಗೀಕರಣ : ೧೭೩೫

1) ಮೋನಾಂಡ್ರಿಕಾ (Monandrica)
ಏಕಕೇಸರ ದಂಡಗಳಿರುವ ಗುಂಪು (Single Stamen)

ಉದಾ : ಅಂತರ ಗಂಗೆ, (Lemna) ಗುಂಡುಹುಲ್ಲು (Scriples)

2) ಡೈಯಾಂಡ್ರಾ (Diandra)
ಎರಡು ಕೇಸರ ದಂಡಗಳಿರುವ ಗುಂಪು (Two Stamens)

ಉದಾ : ಸಹದೇವಿ (Veronica) ಸ್ಯಾಲ್ವಿಯಾ (Salvia)

3) ಟ್ರೈಯಾಂಡ್ರಾ (Triandra)
ಮೂರು ಕೇಸರದಂಡಗಳುಳ್ಳ ಗುಂಪು (Three Stamens)

ಉದಾ : ಪದ್ಮಪುಷ್ಕರ (Iris) (Sysyrinchium)

4) ಟೆಟ್ರಾಂಡ್ರಾ (Tetrandra)
ನಾಲ್ಕು ಕೇಸರ ದಂಡಗಳಿರುವ ಗುಂಪು (Four Stamens)

ಉದಾ : ತವಸೀಮರ (Ulmus), ಹಾಡಗ Cormus)

5) ಪೆಂಟಾಂಡ್ರಾ (Pentandra)
ಐದು ಕೇಸರ ದಂಡಗಳಿರುವ ಗುಂಪು (Five Stamens)

ಉದಾ : ವಸಂತ ಕುಸುಮ (Primula) (Myosotis)

6) ಹೆಕ್ಸಾಂಡ್ರಾ (Hexandra)
ಆರು ಕೇಸರ ದಂಡಗಳಿರುವ ಗುಂಪು (Six Stamens)

ಉದಾ : ಕಾಲಿಕೆ (Berberis) (Alisma)

7) ಹೆಪ್ಟಾಂಡ್ರಾ (Heptannra)
ಏಳು ಕೇಸರ ದಂಡಗಳಿರುವ ಗುಂಪು. (Seven Stamens)

ಉದಾ : ಆಯೆಸ್ಕುಲಸ್ (Aesculus)

8) ಆಕ್ಟಾಂಡ್ರಾ (Octandra)
ಎಂಟು ಕೇಸರ ದಂಡಗಳಿರುವ ಗುಂಪು (Eight Stamens)

ಉದಾ : ಫ್ಯಾಗೋಪೈರಂ (Fagopyrum)

9) ಈನಿಯಾಂಡ್ರಿಯಾ (Eneandria)
ಒಂಭತ್ತು ಕೇಸರ ದಂಡಗಳಿರುವ ಗುಂಪು (Nine Stamens)

ಉದಾ:ರ್‍ಯಾನಂಕ್ಯುಲಸ್ Ranunculus(Rheum)

10) ಡೆಕಾಂಡ್ರಾ (Decandra)
ಹತ್ತು ಕೇಸರ ದಂಡಗಳಿರುವ ಗುಂಪು (Ten Stamens)

ಉದಾ : ಏಸೆರ್ Acer (Kalmia)

# ಗ್ರಂಥಋಣ :

1) Taxonomy of vascular plants.
By : George H. M. Lawrence

2) "Carl Von Linnae"
Encyclopaedia Brittanica. Vol : 9

3) "History of Biology"
By : Charles Singer.

4) "Long Live Linnaeus"–
Reader's Digest April 1964
By : Donald Culross Rettie.

5) "Linnaeus"—Arvid HJ. Uggla.
Translation from Swedish to English
By Alain Blair.
Swedish Institute—Stockholm.

## ಈ ಮಾಲೆಯ ಇತ್ತೀಚಿನ ಪ್ರಕಟಣೆಗಳು

೧೪೬ ಶಕ್ತಿವಿಕಾಸ—ಡಾ|| ಟಿ. ಜಿ. ಸಿದ್ಧಪ್ಪಾರಾಧ್ಯ

೧೪೭ ತೆಂಗು—ಜಿ. ವಿ. ಬಿ. ನಾಯ್ಡು

೧೪೮ ನಿತ್ಯಜೀವನದಲ್ಲಿ ಶಿಲೀಂಧ್ರಗಳು—ಟಿ. ಎನ್. ಸ್ವಾಮಿ

೧೪೯ ನಿಜಗುಣ ಶಿವಯೋಗಿ—ಎಚ್. ಗಂಗಾಧರನ್

೧೫೦ ಸಸ್ಯ ಸಂರಕ್ಷಣೆ—ಎಂ. ಚಿನ್ನಸ್ವಾಮಿರೆಡ್ಡಿ

೧೫೧ ರಾಘವಾಂಕ—ರಾಮೇಗೌಡ

೧೫೨ ಅರವಿಂದರು—ಉ. ಕಾ. ಸುಬ್ಬರಾಯಾಚಾರ್

೧೫೩ ಮುದ್ರಾರಾಕ್ಷಸ—ಡಾ|| ಎನ್. ಎಸ್. ಅನಂತರಂಗಾಚಾರ್

೧೫೪ ಮೂರನೆಯ ಮಂಗರಸ ಕವಿ—ಹಂಪ. ನಾಗರಾಜಯ್ಯ

೧೫೫ ನಾಗಚಂದ್ರ—ಸಿ. ಪಿ. ಕೃಷ್ಣಕುಮಾರ್

೧೫೬ ಗೋಧಿ—ಜಿ. ವಿ. ಬಿ. ನಾಯ್ಡು

೧೫೭ ಆಲ್ಕೋಹಾಲ್—ಕೆ. ಎಸ್. ಲಕ್ಷ್ಮಣರಾವ್